February 2022
ವಿತ್ತಸಂಚಿಕೆ

# INSPIRE INDIA

**ಸಲಹೆ ನಮ್ಮದು ಹೂಡಿಕೆ ನಿಮ್ಮದು**



ಶರಣ್ ಪಾಟೀಲ್
ಆರ್ಥಿಕ ತಜ್ಞ


**INSPIRE INDIA WEALTH PRIVATE LTD.,** @ 65, 'Surasa Enclave' 1st Floor, Puttanna Road, Gandhi Bazar
Basavanagudi, Bengaluru-560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



"ಪ್ರತಿ ದಿನ ನಾವು ಕೈಗೊಳ್ಳುವ ಬಹುತೇಕ ಆಯ್ಕೆಗಳು ಎಚ್ಚರಿಕೆಯಿಂದ ಮಾಡಿದ ನಿರ್ಧಾರದ ಫಲ ಎಂಬ ಭಾವನೆ ಇರುತ್ತದೆ. ಆದರೆ ಅವು ನಿಜಕ್ಕೂ ನಮ್ಮ ಅಭ್ಯಾಸಗಳಾಗಿರುತ್ತವೆ.
–ಚಾರ್ಲ್ಸ್ ಡುಹಿಗ್



"ದಿನಕ್ಕೆ ಶೇಕಡ ಒಂದೇ ಒಂದು ಪ್ರಮಾಣ ನಿಮ್ಮನ್ನು ನೀವು ಉತ್ತಮಪಡಿಸಿಕೊಂಡರೆ ಸುದೀರ್ಘ ಪಥದಲ್ಲಿ ಅದರಿಂದಾಗುವ ಪರಿಣಾಮವೇ ದೊಡ್ಡದು.
–ಜೇಮ್ಸ್ ಕ್ಲಿಯರ್



"ಜನ ನೋವನ್ನು ತಡೆಯಲು ಮಾಡುವಷ್ಟು ಶ್ರಮವನ್ನು ಖುಷಿಯನ್ನು ಸಂಭ್ರಮಿಸಲು ಪಡುವುದಿಲ್ಲ.
–ಟೋನಿ ರಾಬಿನ್ಸ್

# ಎಸ್‌ಐಪಿ ಬೆಳೆದರೆ ಸಂಪತ್ತೂ ಬೆಳೆದೀತು



ನೀವು ಎಂದಾದರೂ ಬೀಜವನ್ನು ನೆಟ್ಟು ಅದು ಬೆಳೆದು ಮರವಾಗುವುದನ್ನು ನೋಡಿದ್ದೀರಾ? ಹೌದು ಎನ್ನುವುದಾದರೆ, ಇಂತಹ ಒಂದು ಬೀಜವನ್ನು ಬಿತ್ತಿ ಅದನ್ನು ಮರವಾಗಿ ಬೆಳೆಯಬೇಕಾದರೆ ಫಲವತ್ತಾದ ಮಣ್ಣು, ಸಾಕಷ್ಟು ಪ್ರಮಾಣದ ನೀರು ಮತ್ತು ಸೂರ್ಯನ ಬೆಳಕಿನ ಬಂಡವಾಳವೂ ಅದಕ್ಕೆ ಬೇಕಾಗುತ್ತದೆ ಎಂಬ ಅರಿವು ನಿಮಗೆ ಇರುತ್ತದೆ. ಇದರಿಂದಾಗಿ ನೀವು ನೆಟ್ಟ ಬೀಜ ಎಷ್ಟು ಬೇಗ ಮರವಾಗಿ ಬೆಳೆದಿದೆ ಎಂಬುದು ತಿಳಿದಿರುತ್ತದೆ. ಈ ಗಿಡವು ಅರಳಿ ಹೆಮ್ಮರವಾಗಿ ಬೆಳೆಯಬೇಕಾದರೆ ಅದು ಇರುವ ಮಣ್ಣಿನ ಫಲವತ್ತತೆ ಹೆಚ್ಚಬೇಕು, ಅದಕ್ಕಿಷ್ಟು ರಸಗೊಬ್ಬರ ಹಾಕಬೇಕು, ಭರಪೂರ ನೀರು ಸಿಗುವಂತೆ ಮಾಡಬೇಕು ಮತ್ತು ಅದು ಬೆಳೆಯಲು ಸಾಕಷ್ಟು ಸ್ಥಳಾವಕಾಶವೂ ಬೇಕಾಗುತ್ತದೆ. ವರ್ಷಗಳ ಕಾಲ ಇದೇ ರೀತಿಯ ಕಾಳಜಿಯಿಂದ ಬೆಳೆಸಿದರೆ ಬೀಜ ಒಂದು ಚೆಂದದ ಮರವಾಗಿ ಬೆಳೆಯುತ್ತದೆ. ಅದರಲ್ಲಿ ಬಿಡುವ ಸಿಹಿಸಿಹಿಯಾದ ಹಣ್ಣುಗಳನ್ನು ವರ್ಷಗಳ ಕಾಲ ತಿನ್ನಬಹುದು.

ಮರಕ್ಕಾಗಲಿ, ಮನುಷ್ಯನಿಗಾಗಲಿ ಬೆಳವಣಿಗೆ ಎನ್ನುವುದು ಜೀವನದ ಅವಿಭಾಜ್ಯ ಅಂಗ. ಹಾಗಾಗಿ ವ್ಯವಸ್ಥಿತವಾದ ಹೂಡಿಕೆ ಯೋಜನೆ (ಎಸ್‌ಐಪಿ– ಖಊಕ) ಮತ್ತು ಸಂಪತ್ತನ್ನು ಸೃಷ್ಟಿಸುವುದು ಒಂದು ಮರವನ್ನು ಕಾಳಜಿಯಿಂದ ಬೆಳೆಸಿದ್ದಕ್ಕೆ ಸಮಾನ. ಒಂದು ಪುಟ್ಟ ಬೀಜವನ್ನು ನೆಟ್ಟಾಗ ಅದು ಅಷ್ಟೊಂದು ದೊಡ್ಡ ಮರವಾಗಿ ಬೆಳೆಯುತ್ತದೆ ಎಂಬ ನಂಬಿಕೆಯೇ ಇರಲಿಲ್ಲ. ಒಂದು ಮರದಂತೆಯೇ ನಿಮ್ಮ ಎಸ್‌ಐಪಿ ಉಳಿತಾಯವು ದೊಡ್ಡ ಮೊತ್ತವಾಗಿ ಬೆಳೆಯಲು ಕಾಲ ಕಾಲಕ್ಕೆ ಉತ್ತೇಜನವೂ ಕೂಡ ಬೇಕಾಗುತ್ತದೆ. ಎಸ್‌ಐಪಿಯನ್ನು ಆರಂಭ ಮಾಡುವ ಸಂದರ್ಭದಲ್ಲಿ ಅದು ಬೃಹತ್ತಾಗಿ ಬೆಳೆಯುತ್ತದೆ ಎಂಬ ಊಹೆ ಕೂಡ ನಿಮಗೆ ಇರುವುದಿಲ್ಲ.

ಒಬ್ಬ ಬುದ್ಧಿವಂತ ಹೂಡಿಕೆದಾರನಿಗೆ ಸಂಪತ್ತನ್ನು ಸೃಷ್ಟಿಸಲು ಎಸ್‌ಐಪಿಗಳು ಅದ್ಭುತವಾದ ಪಯಣ. ಅದು ಉಳಿತಾಯ ಮಾಡುವ ಅಭ್ಯಾಸವನ್ನು ಬೆಳೆಸುತ್ತದೆ ಮತ್ತು ನಿಮ್ಮ ಜೇಬಿಗೂ ಸುಲಭವಾಗುತ್ತದೆ. ಅವು ಅತ್ಯಂತ ಶಿಸ್ತಿನಿಂದ ಕೂಡಿದ್ದು ಸ್ವಯಂಚಾಲಿತವಾಗಿರುತ್ತದೆ. ಪ್ರತಿ ತಿಂಗಳು ಹೂಡಿಕೆಯ ಬಗ್ಗೆ ನೆನಪು ಮಾಡಬೇಕಾದ ಅಗತ್ಯವೇನೂ ಇರುವುದಿಲ್ಲ. ಎಸ್‌ಐಪಿ ವಿಧಾನದ ಮೂಲಕ ಸಂಪತ್ತನ್ನು ಸೃಷ್ಟಿಸುವ ಯೋಚನೆಯನ್ನು ವ್ಯಾಪಕವಾಗಿ ಶ್ಲಾಘಿಸಲಾಗುತ್ತದೆ. ಹೆಚ್ಚಿನ ಹೂಡಿಕೆದಾರರು ನಿಶ್ಚಿತ ಎಸ್‌ಐಪಿಗಳನ್ನು ಆರಂಭಿಸಿ ಅದನ್ನು ವರ್ಷಗಳ ಕಾಲ ಮರೆತು ಬಿಟ್ಟಿರುತ್ತಾರೆ. ವರ್ಷ ವರ್ಷವೂ ಅವರು ಹೆಚ್ಚುಕಡಿಮೆ ಯಾವುದೇ ಪ್ರಗತಿಯೂ ಇಲ್ಲದೆ ಒಂದೇ ಮೊತ್ತದ ಹಣವನ್ನು ಹೂಡಿಕೆ ಮಾಡುತ್ತಲೇ ಇರುತ್ತಾರೆ. ಸುದೀರ್ಘ ಕಾಲಕ್ಕೆ ಇದರ ಒಂದೊಂದು ರುಪಾಯಿಯೂ ಕೂಡ ದೊಡ್ಡ ಲಾಭವನ್ನು ಗಳಿಸುತ್ತಾ ಹೋಗುತ್ತದೆ. ಆದರೆ ನಿಶ್ಚಿತ ಎಸ್‌ಐಪಿಗಳಲ್ಲಿ ನಮಗೆ ಅಗತ್ಯವಾದಷ್ಟು ಅಥವಾ ನಾವು ಬಯಸಿದಷ್ಟು ಸಂಪತ್ತಿನ ಕ್ರೋಢೀಕರಣ ಆಗುವುದಿಲ್ಲ. ಉಳಿತಾಯ ಮಾಡುವುದು ಮುಖ್ಯವಾದರೂ ಎಷ್ಟು ಪ್ರಮಾಣದ ಉಳಿತಾಯ ಎನ್ನುವುದು ಬಹಳ ಮುಖ್ಯ. ಹೆಚ್ಚು ಹೂಡಿಕೆಯನ್ನು ಮಾಡುವುದು ಎಂದಿಗೂ ಉತ್ತಮ ಕೂಡ. ಹಾಗಾಗಿ ಎಸ್‌ಐಪಿಗಳಿಗೆ ಕಾಲ ಕಾಲಕ್ಕೆ ಉತ್ತೇಜನವನ್ನು ನೀಡುವುದು ಒಳ್ಳೆಯದು. ಈಗ ಹೊಸ ವರ್ಷ ಬಂದಿದೆ. ಎಸ್‌ಐಪಿಯನ್ನು ಮಾಡಲು ಇದಕ್ಕಿಂತ ಸಕಾಲ ಇನ್ನೊಂದಿಲ್ಲ.

ಉಳಿತಾಯಗಳು ವರ್ಷಾನುಗಟ್ಟಳೆ ಒಂದೇ ಸ್ಥಿರವಾಗಿರದೇ ಕಾಲಕಾಲಕ್ಕೆ ಹೆಚ್ಚಿಸಬೇಕು. ನೀವು ಮಾಡುವ ಎಸ್‌ಐಪಿ ಉಳಿತಾಯಗಳು ಯಾವತ್ತೂ ನಿಮ್ಮದೇ ಗಳಿಕೆಯ ಪ್ರಗತಿಯ ದಾರಿಯಲ್ಲಿರಬೇಕು. ನಿಮ್ಮ ಒಟ್ಟು ಆದಾಯದ ಪ್ರಮಾಣವನ್ನು ಗಮನಿಸಿದಾಗ ನಿಮ್ಮ ಎಸ್‌ಐಪಿ ಉಳಿತಾಯಗಳು ಕಾಲಾನುಕಾಲಕ್ಕೆ ಬೆಳೆಯುತ್ತಿರಬೇಕು. ಅದು ನಿಮ್ಮ ಆದಾಯ ಮತ್ತು ಉಳಿತಾಯದ ಸಾಮರ್ಥ್ಯಗಳು ಬೆಳೆದಂತೆ ಬೆಳವಣಿಗೆಯನ್ನು ಕಾಣಬೇಕು ಅಥವಾ ಕನಿಷ್ಠ ಪಕ್ಷ ಸ್ಥಿರವಾಗಿರಬೇಕು. ಪ್ರತಿ ವರ್ಷ ನಾವು ಎಸ್‌ಐಪಿ ಮೊತ್ತವನ್ನು ಹೆಚ್ಚಿಸುತ್ತಾ ಸಾಗಬೇಕು, ಕ್ಯಾಲೆಂಡರ್

## ಒಳಪುಟ ನೋಟ...




ಪುಟ 3

**ವಿಮಾ ಕ್ಲೈಮ್ ತಿರಸ್ಕಾರಕ್ಕೆ ಕಾರಣಗಳು ಹಲವು**




ಪುಟ 5

ವರ್ಷ ಆರಂಭವಾಗುವ ಹೊತ್ತಿಗೆ ಅಥವಾ ಹಣಕಾಸು ವರ್ಷ ಆರಂಭವಾಗುವ ಕಾಲಕ್ಕೆ ಅಥವಾ ಧನ್ ತೇರಾದಂತಹ ಶುಭ ಮುಹೂರ್ತದಲ್ಲಿ ಈ ಕೆಲಸವನ್ನು ಮಾಡಬೇಕು. ನಿಮ್ಮ ಆದಾಯದಲ್ಲಿ ಹೆಚ್ಚಳವಾದಂತೆ ಅದಕ್ಕೆ ತಕ್ಕಂತೆ ಹೂಡಿಕೆ ಮಾಡಬಹುದಾದ ಹೆಚ್ಚುವರಿ ಮೊತ್ತವನ್ನು ಎಸ್‌ಐಪಿಯಲ್ಲಿ ಮಾಡಲು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಎಸ್‌ಐಪಿ ಅನ್ನು ನಿಯಮಿತವಾಗಿ ಹೆಚ್ಚಿಸಲು ಆಗದಿದ್ದರೆ ಪ್ರತಿ ತಿಂಗಳು 1000 ರೂ.ಗಳಿಂದ 5000 ರೂ. ತನಕ ಪುನರಾವರ್ತನೆಯಾಗುವಂತೆ ಸಾಂಕೇತಿಕ ಮೊತ್ತವನ್ನಾದರೂ ಏರಿಸುವ ಪ್ರಯತ್ನವನ್ನು ಮಾಡಬೇಕು. ಇಂತಹ ಸಾಂಕೇತಿಕ ಮೊತ್ತವನ್ನು ನಿಯಮಿತವಾಗಿ ಮಾಡುವುದರಿಂದ ನಿಮ್ಮ ಸಂಪತ್ತಿನ ಸೃಷ್ಟಿಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತರಲು ಸಾಧ್ಯವಿದೆ.

5000 ರೂ. ಎಸ್‌ಐಪಿಯ ಉದಾಹರಣೆಯೊಂದಿಗೆ ಶೇ.12ರಷ್ಟು ಆದಾಯವನ್ನು ಗಳಿಸಬಹುದಾದ ಮೂರು ವಿಭಿನ್ನವಾದ ಏರಿಕೆ ಮೊತ್ತ ಹಾಗೂ ನಾನಾ ಸಮಯದ ಚೌಕಟ್ಟಿನಲ್ಲಿ ನೋಡೋಣ.

| ವರ್ಷಗಳು | 10 | 15 | 20 | 30 |
|---|---|---|---|---|
| ಎಸ್‌ಐಪಿಯಲ್ಲಿ ಯಾವುದೇ ಏರಿಕೆ ಇಲ್ಲ | 11.20 ಲಕ್ಷ | 23.80 ಲಕ್ಷ | 45.99 ಲಕ್ಷ | 1.54 ಕೋಟಿ |
| ಪ್ರತಿ ವರ್ಷ 500 ರೂ. ಏರಿಕೆ | 15.22 ಲಕ್ಷ | 35.65 ಲಕ್ಷ | 73.68 ಲಕ್ಷ | 2.66 ಕೋಟಿ |
| ಪ್ರತಿ ವರ್ಷ 1000 ರೂ. ಏರಿಕೆ | 19.23 ಲಕ್ಷ | 49.50 ಲಕ್ಷ | 1.01 ಕೋಟಿ | 3.79 ಕೋಟಿ |
| ಪ್ರತಿ ವರ್ಷ 5000 ರೂ. ಏರಿಕೆ | 51.34 ಲಕ್ಷ | 1.42 ಕೋಟಿ | 3.23 ಕೋಟಿ | 12.79 ಕೋಟಿ |



## ಏರುತ್ತಿರುವ ಆಕಾಂಕ್ಷೆಗಳು, ಜೀವನದ ಮಟ್ಟ

**ಇಷ್ಟೆಲ್ಲ ವಿವರಣೆಯ ಬಳಿಕ ಪ್ರತಿ ವರ್ಷ ಏರುವುದು ನಿಮ್ಮ ಆದಾಯ ಮಾತ್ರ ಅಲ್ಲ. ನಿಮ್ಮ ಜೀವನ ಮಟ್ಟವೂ ಏರಿದೆ, ನಿಮ್ಮ ಆಸೆ–ಆಕಾಂಕ್ಷೆಗಳೂ, ನಿಮ್ಮ ಜೀವನದ ಕನಸುಗಳೂ ಏರಿವೆ. ಒಂದು ದಶಕದ ಹಿಂದೆ ನಮ್ಮ ಕನಸಿನ ಕಾರು ಹೊಂಡಾ ಸಿಟಿ ಆಗಿತ್ತು. ಆದರೆ ಇಂದು ಅದು ಬಿಎಂಡಬ್ಲ್ಯು/ಮರ್ಸಿಡಿಸ್ ಅಥವಾ ಆಡಿ ಕಾರಿನ ಹಂತಕ್ಕೆ ಏರಿರಬಹುದು. ಯಾಕಾಗಬಾರದು? ನಮ್ಮ ಹಣಕಾಸಿನ ಗುರಿಗಳು ಬೆಳೆಯುತ್ತ ಹೋದ ಹಾಗೆ ನಮ್ಮ ಆಸೆ–ಆಕಾಂಕ್ಷೆಗಳು ಕಾಲಕ್ಕೆ ತಕ್ಕಂತೆ ಏರುತ್ತ ಹೋಗುತ್ತದೆ. ನಿಮ್ಮ ಮಗಳು ಐದು ವರ್ಷದವಳಿದ್ದಾಗ ಆಕೆಯ ಮದುವೆಯನ್ನು ಯೋಚಿಸುವ ರೀತಿಯು 20 ವರ್ಷ ಬಳಿಕ ನಿಜಕ್ಕೂ ಭಿನ್ನವಾಗಿರುತ್ತದೆ. ನಿಮ್ಮ ಎಸ್‌ಐಪಿಗಳು ಸ್ಥಿರವಾಗಿದ್ದರೆ ಕಾಲಾನು ಕಾಲಕ್ಕೆ ಬದಲಾಗುವ ನಿಮ್ಮ ಆಸೆ–ಆಕಾಂಕ್ಷೆಗಳನ್ನು ಹೇಗೆ ಪೂರೈಸಲು ಸಾಧ್ಯವಾಗುತ್ತದೆ? ನಿಮ್ಮ ಕನಸುಗಳ ಗತಿಯಲ್ಲಿಯೇ ಪ್ರತಿ ವರ್ಷವೂ ನಿಮ್ಮ ಎಸ್‌ಐಪಿಗಳು ಸರಿಹೊಂದುತ್ತ ಸಾಗಬೇಕು ಎನ್ನುವುದರಲ್ಲಿಯೇ ಉತ್ತರ ಅಡಗಿದೆ.**

ಮೇಲಿನ ಟೇಬಲ್‌ನಲ್ಲಿ ತೋರಿಸಿದಂತೆ ಪ್ರತಿ ವರ್ಷ 500 ಅಥವಾ 1000 ರೂಪಾಯಿಯಂತಹ ಸಣ್ಣ ಪ್ರಮಾಣದ ಏರಿಕೆ ಕೂಡ ಸುದೀರ್ಘಾವಧಿಯಲ್ಲಿ ಗಣನೀಯ ಪ್ರಮಾಣದ ಏರಿಕೆಯನ್ನು ತರಬಲ್ಲದು. ಕೂಡಿಕೆ ಅಥವಾ ಶಕ್ತಿ ಬೆಳೆಯುತ್ತಿರುವ ಎಸ್‌ಐಪಿಯಲ್ಲಿ ಹೆಚ್ಚಿನ ಅಚ್ಚರಿಯನ್ನು ತರಬಲ್ಲದು. ಹೆಚ್ಚಿನ ಹೂಡಿಕೆದಾರರು ಸಾಮಾನ್ಯವಾಗಿ 'ಪ್ರಗತಿ ರಹಿತ' ಅಂಕಿಗಳಿಗೆ/ಸಂಖ್ಯೆಗಳಿಗೆ ಸಂತೃಪ್ತರಾಗಿರುತ್ತಾರೆ, ಆದರೆ ಒಂದು ಸಣ್ಣ ಹೆಚ್ಚಳ ಕೂಡ ಸುದೀರ್ಘಾವಧಿಯಲ್ಲಿ ಬಹಳ ದೊಡ್ಡ ವ್ಯತ್ಯಾಸವನ್ನೇ ಉಂಟು ಮಾಡುತ್ತವೆ ಎಂಬ ಅರಿವು ಇರುವುದಿಲ್ಲ. ಇಂತಹ ಒಂದು ಕೂಡಿಕೆಯ ಶಕ್ತಿಯಿಂದಾಗಿ ನಿಮ್ಮ ಹೆಚ್ಚುವರಿ ಮೊತ್ತವು ನಿಮ್ಮ ಹೂಡಿಕೆ ಮೌಲ್ಯವನ್ನು ಹಲವು ಪಟ್ಟು ಹೆಚ್ಚಿಸಬಲ್ಲುದು. ಇಂತಹ ಸಂಭವನೀಯ ಆದಾಯವು ನಿಮ್ಮ ಭವಿಷ್ಯದ ಹಣಕಾಸು ಗುರಿಗಳನ್ನು ಸಾಧ್ಯವಾದಷ್ಟು ಬೇಗ ಪೂರೈಸಿಕೊಳ್ಳಲು ಬೇಕಾದ ಬೃಹತ್ ಮೊತ್ತವನ್ನು ಹುಟ್ಟುಹಾಕಬಲ್ಲದು. ಅದು ನೀವು ಹಿಂದೆ ಊಹೆ ಮಾಡದೇ ಇರುವಷ್ಟು ದೊಡ್ಡ ಪ್ರಮಾಣದಲ್ಲಿರಬಹುದು.



**ಹಣದುಬ್ಬರ ಎಂದರೆ ನಿಶ್ಚಿತ ಎಸ್‌ಐಪಿಗಳೊಂದಿಗೆ ಕಡಿಮೆ ಉಳಿತಾಯ ಮಾಡುತ್ತಿದ್ದೀರಿ ಎಂದು ಅರ್ಥ!:** ನಿನ್ನೆ ಇದ್ದ ಒಂದು ರೂಪಾಯಿಯ ಮೌಲ್ಯ ಇಂದು ಒಂದು ರೂಪಾಯಿಗಿಂತ ಕಡಿಮೆ. ಇಂತಹ ಒಂದು ವಾಸ್ತವ ಸಂಗತಿ ಅನೇಕ ಹೂಡಿಕೆದಾರರ ದಾರಿಯನ್ನು ತಪ್ಪಿಸುತ್ತದೆ. ನಮ್ಮ ಕೈಯಲ್ಲಿ ಸಾಕಷ್ಟು ಹಣ ಇದ್ದಾಗ ಮಾತ್ರವಷ್ಟೇ ಹೆಚ್ಚು ಹೂಡಿಕೆ ಅಥವಾ ಉಳಿತಾಯ ಮಾಡಲು ಸಾಧ್ಯ ಎಂದು ಅವರು ಭಾವಿಸಿರುತ್ತಾರೆ. ಹಣದುಬ್ಬರವು ಹಣದ ಮೌಲ್ಯವನ್ನು ನಿರಂತರವಾಗಿ ಸವೆಯುವಂತೆ ಮಾಡುವುದರೊಂದಿಗೆ, ಇಂದು ಗಣನೀಯ ಮೊತ್ತ ಎಂದು ಭಾವಿಸುವ ಹಣದ ಮೊತ್ತವು ಮುಂದಿನ ದಿನಗಳಲ್ಲಿ ಅದೇ ಮೌಲ್ಯವನ್ನು ಹೊಂದಿರುವುದಿಲ್ಲ. ಉದಾಹರಣೆಗೆ, ಶೇ.7ರಷ್ಟು ಹಣದುಬ್ಬರದೊಂದಿಗೆ ಇಂದಿನ 5000 ರೂ. ಮೊತ್ತವು ಮುಂದಿನ ವರ್ಷ 4650 ರೂ.ಗೆ ಇಳಿಯುತ್ತದೆ, ಮೂರು ವರ್ಷಗಳಲ್ಲಿ 4,021ಕ್ಕೆ ಮತ್ತು ಐದು ವರ್ಷಗಳಲ್ಲಿ 3479ಕ್ಕೆ ಇಳಿಕೆಯಾಗುತ್ತದೆ. ಇದರ ಅರ್ಥ ಏನೆಂದರೆ ನೀವು ನಿಶ್ಚಿತ ಎಸ್‌ಐಪಿಯೊಂದಿಗೆ ಕಡಿಮೆ ಉಳಿತಾಯ ಮಾಡುತ್ತಿದ್ದೀರಿ. ಹಾಗಾಗಿ ಹಣದುಬ್ಬರವನ್ನು ಮೀರಿ ನಾವು ಬೆಳೆಯಲು ನಿಮ್ಮ ಮಾಸಿಕ ಎಸ್‌ಐಪಿ ಮೊತ್ತವನ್ನು ಬೆಳೆಸುವ ಅಗತ್ಯವಿದೆ. ಹಣದುಬ್ಬರದ ನಷ್ಟಕ್ಕಿಂತ ಮುನ್ನಡೆಯನ್ನು ಸಾಧಿಸಲು ಈ ಎಸ್‌ಐಪಿಯು ಪ್ರತಿ ವರ್ಷ ಕನಿಷ್ಠ 5000 ರೂ.ಗಳಷ್ಟು ಏರಿಕೆಯಾಗಬೇಕು.




ಇನ್ನೂ ಸ್ಪಷ್ಟವಾದ ಮಾತುಗಳಲ್ಲಿ ಹೇಳಬೇಕೆಂದರೆ 500 ರೂ. ಮೊತ್ತದಷ್ಟು ಏರಿಕೆಯು ಮುಂದಿನ ಕೆಲವು ವರ್ಷಗಳಲ್ಲಿ ಕಿರಿದಾಗುತ್ತ ಹೋಗುತ್ತದೆ. ಹಾಗಾಗಿ ಎಸ್‌ಐಪಿಗಳನ್ನು ಹಂತ ಹಂತವಾಗಿ ಏರಿಸುತ್ತಾ ಹೋಗಬೇಕು. ಉದಾಹರಣೆಗೆ, ಮುಂದಿನ ಮೂರು ವರ್ಷಗಳಲ್ಲಿ ನಿಮ್ಮ ಎಸ್‌ಐಪಿಯನ್ನು 500 ರೂ.ಗಳಷ್ಟು ಏರಿಸುವುದು ಮತ್ತು ಆ ಬಳಿಕದ 3 ವರ್ಷಗಳಿಗೆ 1000 ರೂ, ಆನಂತರ 1500 ರೂ. ಏರಿಸುತ್ತ ಹಣದುಬ್ಬರವನ್ನು ಗಮನದಲ್ಲಿಟ್ಟುಕೊಂಡು ಮೂಲ ಎಸ್‌ಐಪಿಯನ್ನು 5000 ರೂ. ತನಕವೂ ಪರಿಗಣಿಸಬಹುದು.

**ಸಾರಾಂಶ:** ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನಮ್ಮ ಸಂಪತ್ತು ವೃದ್ಧಿಯಾಗಬೇಕು ಮತ್ತು ನಮ್ಮ ಜೀವನದ ಮಹತ್ವಾಕಾಂಕ್ಷೆಗಳಿಗೆ ಮತ್ತು ಪ್ರತಿಷ್ಠೆಗೆ ತಕ್ಕಂತೆ ನಾವು ಬೆಳೆಯಬೇಕು ಎಂಬ ಬಯಕೆಯಿದ್ದರೆ ನಮ್ಮ ಎಸ್‌ಐಪಿಗಳು ಕೂಡ ನಿಯಮಿತವಾಗಿ ಬೆಳೆಯುತ್ತ ಹೋಗಬೇಕು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಹೊಸ ಎಸ್‌ಐಪಿಗಳನ್ನು ಆರಂಭಿಸುವ ಮೂಲಕ ಅಥವಾ ಎಸ್‌ಐಪಿಯ ಆರಂಭದ ಹಂತದಲ್ಲಿ ನಿಯಮಿತವಾದ ಟಾಪ್–ಅಪ್‌ನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಯಾವುದೇ ಹಂತದಲ್ಲಿ ನಿಮ್ಮ ಎಸ್‌ಐಪಿಗಳ ಉಳಿತಾಯವನ್ನು ಹೆಚ್ಚಿಸಿಕೊಳ್ಳಬಹುದು. ನಮಗೆ ಇವೆಲ್ಲವನ್ನೂ ನೆನಪಿಟ್ಟುಕೊಳ್ಳಲು ಸಾಧ್ಯವಿಲ್ಲ ಅನ್ನುವುದಾದರೆ ಅರೆ–ವಾರ್ಷಿಕ ಮತ್ತು ವಾರ್ಷಿಕ ಆವರ್ತನವನ್ನು ಹೊಂದಿದ ಟಾಪ್–ಅಪ್ ಆಯ್ಕೆಗಳನ್ನು ಮಾಡಿಕೊಂಡರೆ ನಮ್ಮ ಎಸ್‌ಐಪಿಗಳು ಸ್ವಯಂಚಾಲಿತವಾಗಿ ಏರಿಕೆಯಾಗಲು ಅನುಕೂಲವಾಗುತ್ತದೆ. ಹಾಗಾಗಿ ಈ ಹಿಂದಿನ ವರ್ಷಗಳಲ್ಲಿ ನಿಮ್ಮ ಎಸ್‌ಐಪಿಯನ್ನು ಹೆಚ್ಚಿಸಲು ನಿಮಗೆ ಸಾಧ್ಯವಾಗಿಲ್ಲದೇ ಇದ್ದರೆ ಈಗ ಅದಕ್ಕೆ ಕಾಲ ಸನ್ನಿಹಿತವಾಗಿದೆ. 2022ರ ವರ್ಷವನ್ನು ಇಂತಹ ದೃಢ ನಿರ್ಧಾರದೊಂದಿಗೆ ಆರಂಭ ಮಾಡೋಣ–ನಮ್ಮ ಎಸ್‌ಐಪಿ ಉಳಿತಾಯಗಳನ್ನು ಹೆಚ್ಚಿಸುವ ಸಂಕಲ್ಪ ಮಾಡೋಣ.

ನಿಮ್ಮೆಲ್ಲರಿಗೆ ಸಂಭ್ರಮ ಹಾಗೂ ಸಂಪದ್ಭರಿತ ಹೊಸ ವರ್ಷದ ಹಾರೈಕೆ.

# ಬದುಕು ಪರಿವರ್ತಿಸುವ ವರ್ಷವಾಗಲಿ 2022




## ಪ್ರೇರಣೆ ಮತ್ತು ಮಾರ್ಗದರ್ಶಕರು

ಶ್ರೇಷ್ಠವಾದುದನ್ನು ಸಾಧಿಸಲು, ಹೆಚ್ಚಿನದನ್ನು ಅಪೇಕ್ಷಿಸಲು ಮತ್ತು ನಿಮ್ಮ ಗುರಿಗಳನ್ನು ತಲುಪಲು ಪ್ರೇರಣೆ, ಉತ್ತೇಜನ ಅತ್ಯಗತ್ಯ. ಇದು ಪ್ರಗತಿಯ ಅವಿಭಾಜ್ಯ ಅಂಗ. ನಮ್ಮಲ್ಲಿ ಬಹುತೇಕರು ಸ್ವಯಂ-ಪ್ರೇರಣೆಗೆ ಒಳಗಾದವರು ಮತ್ತು ನಮಗೆ ಇದರ ಬಗ್ಗೆ ಹೆಚ್ಚಿನ ಅರಿವು ಇಲ್ಲ. ಆದರೆ ಸರಿಯಾದ ರೀತಿಯಲ್ಲಿ ಪ್ರೇರಣೆ ಮತ್ತು ಮಾರ್ಗದರ್ಶನ ದೊರೆತರೆ ನಮ್ಮಿಂದ ಇನ್ನಷ್ಟು ಸಾಧನೆಯನ್ನು ಮಾಡಲು ಸಾಧ್ಯವಿದೆ. ನಮ್ಮನ್ನು ಉತ್ತೇಜಿಸುವ ಮಾರ್ಗದರ್ಶಕರನ್ನು ಹೊಂದುವುದರಿಂದ ಜೀವನದ ಪ್ರಮುಖ ರಂಗಗಳಲ್ಲಿ ಅದರಿಂದ ಇನ್ನಷ್ಟು ಕಲಿಯುವಂತೆ ಮಾಡುತ್ತದೆ. ನೀವೊಬ್ಬರು ವೃತ್ತಿಪರರಾಗಿರಿ, ಉದ್ಯಮಿ ಅಥವಾ ಉದ್ಯೋಗಿಯಾಗಿರಿ ಈ ಮಾತು ಮಾತ್ರ ಸತ್ಯ. ಹಾಗಾಗಿ ಭವಿಷ್ಯದಲ್ಲಿ ನಾವು ಈ ವಿಚಾರದಲ್ಲಿ ಯೋಚನೆ ಮಾಡಬೇಕಾದ ಅಗತ್ಯವಿದೆ.


ಬದಲಾವಣೆ ಮಾತ್ರ ನಿತ್ಯ-ನಿರಂತರ. ಆದರೆ, ಬದಲಾಗುತ್ತಿರುವ ಜಗತ್ತಿಗೆ ತಕ್ಕಂತೆ ಹೂಡಿಕೆಗಳನ್ನು ಮಾಡುತ್ತ ನಾವೂ ಬದಲಾವಣೆಯ ಕಡೆಗೆ ಮುಖ ಮಾಡದೇ ಇದ್ದರೆ ನಮ್ಮ ಸುತ್ತಲಿನ ಜಗತ್ತಿನಲ್ಲಿ ಗತಿಯನ್ನು ಕಳೆದುಕೊಂಡು ಸವಕಲು ನಾಣ್ಯವಾಗುವ ಸಾಧ್ಯತೆ ಇರುತ್ತದೆ. ಗಮನಾರ್ಹವಾದ ಬದಲಾವಣೆಯ ಕುರಿತು ನಾವು ನಿರ್ಧಾರ ಮಾಡುವ ತನಕ ನಮ್ಮ ಬದುಕಿನಲ್ಲಿ ಯಾವುದೇ ಗಣನೀಯವಾದುದು ಯಾವುದೂ ಸಂಭವಿಸುವುದಿಲ್ಲ. ನಿರಂತರ ಚಕ್ರದಂತಿರುವ ಬದಲಾವಣೆಯು ಬದುಕಿನಲ್ಲಿ ಯಾವ ಸಂದರ್ಭದಲ್ಲಾದರೂ ಸಂಭವಿಸಬಹುದು. ಆದರೆ ವರ್ಷದ ಆರಂಭದಲ್ಲಿ ಅದಕ್ಕೆ ಸಿದ್ಧತೆಗಳನ್ನು ಮಾಡುವುದು ಬಹುಷಃ ಸೂಕ್ತ ಅನಿಸುತ್ತದೆ.

ಹೊಸ ವರ್ಷಗಳು ಬರುತ್ತದೆ ಎನ್ನುವಾಗ 'ಹೊಸ ನಿರ್ಣಯ'ಗಳನ್ನು ಮಾಡುವುದು ಸಾಮಾನ್ಯ. ಆದರೆ ಅದು ಎಷ್ಟರ ಮಟ್ಟಿಗೆ ಯಶಸ್ಸನ್ನು ಕಾಣುತ್ತದೆ ಎಂಬುದು ಮುಖ್ಯ. ನಾವು ಒಂದಷ್ಟು ದೊಡ್ಡ ದೊಡ್ಡ ನಿರ್ಣಯಗಳನ್ನು ಮಾಡುವುದಕ್ಕೆ ಬದಲಾಗಿ ನಮ್ಮ ಮನಸ್ಥಿತಿಗಳನ್ನು ಮತ್ತು ನಡವಳಿಕೆಗಳನ್ನು ಬದಲಿಸಿಕೊಳ್ಳುವ ಕಡೆಗೆ ಆದ್ಯತೆಯನ್ನು ನೀಡಬೇಕು. ಇದರಿಂದ ಸಣ್ಣ ಹಾಗೂ ನಿಜಕ್ಕೂ ಸಾಧ್ಯವಾಗುವ ಸಂಗತಿಗಳನ್ನು ಕಾರ್ಯರೂಪಕ್ಕೆ ತರುವಂತೆ ಮಾಡಲು ಸಾಧ್ಯವಾಗುತ್ತದೆ. ಇದು ಯಶಸ್ಸು ಹೊಂದುವ ಸಂಭವಗಳೂ ಅಧಿಕವಾಗಿರುತ್ತದೆ. ಇದನ್ನು ವರ್ಷದ ಆರಂಭದಲ್ಲಿ ನೀವು ಒಂದು ಪರಿಪಾಠ ಅಥವಾ ಇನ್ನೇನಾದರೂ ಹೆಸರಿನಿಂದ ಕರೆಯಿರಿ. ಇಂತಹ ನಿರ್ಧಾರಗಳು ಜೀವನದಲ್ಲಿ ಬದಲಾವಣೆಗಳನ್ನು ತರಲು ಸಹಕಾರಿಯಾಗಿವೆ.

ಜೀವನದಲ್ಲಿ ಬದಲಾವಣೆ ತರಬಹುದಾದ ಹತ್ತು ಅಂಶಗಳನ್ನು ನಾವು ಇಲ್ಲಿ ಪಟ್ಟಿ ಮಾಡಿದ್ದೇವೆ. ಅದನ್ನು ಕಾರ್ಯರೂಪಕ್ಕೆ ತರಬಹುದಾದ ಅಂಶಗಳು ಅಥವಾ ಮನಸ್ಥಿತಿ/ನಡವಳಿಕೆಯಲ್ಲಿನ ಬದಲಾವಣೆ ಎಂದಾದರೂ ನೀವು ಪರಿಗಣಿಸಬಹುದು. ಆದರೆ ಇದನ್ನು ಪ್ರತಿಯೊಬ್ಬ ಹೂಡಿಕೆದಾರರು ಕೂಡ ಗಮನಿಸಬೇಕು ಎಂಬುದು ನಮ್ಮ ಆಶಯ. ಇಲ್ಲಿನ ಪ್ರತಿಯೊಂದು ಅಂಶಗಳು ಕೂಡ ನಮ್ಮ ಜೀವನದಲ್ಲಿ ಪರಿವರ್ತನೆ ತರುವಷ್ಟು ಸಶಕ್ತವಾಗಿವೆ ಎಂಬುದಂತೂ ನಿಜ. ಈ ವರ್ಷ ಇವೆಲ್ಲ ಅಂಶಗಳನ್ನೂ ಸಾಧಿಸಬಹುದು ಎಂಬುದೇನೂ ನಮ್ಮ ನಿರೀಕ್ಷೆಯಲ್ಲ. ಆದರೆ ಇವುಗಳಲ್ಲಿ ಕೆಲವನ್ನಾದರೂ ಜಾರಿಗೆ ತರುವಲ್ಲಿ ಯಶಸ್ವಿಯಾದರೆ ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳಬಹುದು.

## ಉತ್ತಮ ಅಭ್ಯಾಸಗಳನ್ನು ಬೆಳೆಸಿ ಕೆಟ್ಟದನ್ನು ನಿರ್ಮೂಲನ ಮಾಡಿ

ನಾವು ಕರಗತ ಮಾಡಿಕೊಳ್ಳುವ ಉತ್ತಮ ಅಭ್ಯಾಸಗಳು ನಮ್ಮ ಜೀವನದಲ್ಲಿ ಬದಲಾವಣೆಗೆ ದಾರಿ ಮಾಡಿಕೊಡುತ್ತವೆ. ಕೆಟ್ಟ ಅಭ್ಯಾಸಗಳಿಗೆ ಹೋಲಿಸಿದರೆ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದೇ ಕಷ್ಟದ ಕೆಲಸ. ಮುಖ್ಯ ಸಂಗತಿ ಏನೆಂದರೆ ನಾವು ಇಡುವ ಸಣ್ಣ ಸಣ್ಣ ಹೆಜ್ಜೆಗಳು ದೊಡ್ಡ ಹಾದಿಯ ಕಡೆಗೆ ನಮ್ಮನ್ನು ಕೊಂಡೊಯ್ಯಬಹುದು. ಇಂತಹ ಉತ್ತಮ ಪರಿಪಾಠಗಳನ್ನು ಮತ್ತೆ ಮತ್ತೆ ಶಿಸ್ತಿನಿಂದ ನಿರ್ವಹಿಸಿದಾಗ ಅದು ನಮ್ಮ ಜೀವನದ ಎಲ್ಲ ಆಯಾಮಗಳನ್ನು ಒಳಗೊಳ್ಳುವ ಸಾಧ್ಯತೆಗಳಿರುತ್ತವೆ. ಅದರಲ್ಲಿ ಹಣವೂ ಕೂಡ ಒಂದು. ಯಶಸ್ವೀ ಹೂಡಿಕೆದಾರರು ಅನುಸರಿಸುವ ಉತ್ತಮ ಹಣದ ಅಭ್ಯಾಸಗಳು ಅವರು ಅತ್ಯಂತ ಶ್ರಮಶೀಲತೆಯಿಂದ, ಕಾರ್ಯನಿಷ್ಠೆಯಿಂದ ಸುದೀರ್ಘ ಕಾಲದಿಂದ ಬಳಸಿಕೊಂಡು ಬಂದಿರುವ ಕ್ರಮಗಳು. ಹಣಕ್ಕೆ ಸಂಬಂಧಿಸಿದ ಅಭ್ಯಾಸಗಳೆಂದರೆ ನೀವು ಮಾಡುವ ಉಳಿತಾಯ, ವೆಚ್ಚ, ನಿರ್ವಹಣೆ, ಸಾಲ ಪಡೆಯುವುದು, ಸಾಲ ನೀಡುವುದು ಮತ್ತು ಹೂಡಿಕೆ ಮಾಡುವುದು ಸೇರಿರುತ್ತದೆ. ಇಂತಹ ಅಭ್ಯಾಸಗಳು ಅನೇಕರಿಗೆ ಪರಿಚಿತವೂ ಹೌದು. ಈ ವರ್ಷ ಮೂರು ಉತ್ತಮ ಅಭ್ಯಾಸಗಳನ್ನು ಬೆಳೆಸಿಕೊಳ್ಳುವ ಮತ್ತು ಮೂರು ಕೆಟ್ಟ ಅಭ್ಯಾಸಗಳನ್ನು ಕೈಬಿಡುವ ಪಟ್ಟಿಯನ್ನು ಮಾಡಬೇಕು ಎಂದು ನಾವು ನಿಮ್ಮನ್ನು ಈ ಮೂಲಕ ಒತ್ತಾಯಿಸುತ್ತೇವೆ. ಒಂದು ಮಾತನ್ನು ನೆನಪಿಡಿ, ಪ್ರತಿ ದಿನ ಕೇವಲ ಶೇ.1ರಷ್ಟು ಸುಧಾರಣೆ ಕಂಡರೂ ಒಂದು ವರ್ಷಕ್ಕೆ ಶೇ.365ರಷ್ಟು ಸುಧಾರಣೆ ಸಾಧಿಸಿದಂತೆ.




## ಹೆಚ್ಚಿನ ಗೌರವವನ್ನು ನೀಡಿ

ಇತರ ವ್ಯಕ್ತಿಗಳಿಗೆ ನೀವು ನೀಡುವ ಗೌರವ ಜೀವನದ ಅತಿಮುಖ್ಯ ಅಂಶಗಳಲ್ಲಿ ಒಂದಾಗಿದೆ. ಅದು ನಿಮ್ಮದೇ ಗುಣದ ಪ್ರತಿಬಿಂಬ ಎನ್ನುವುದರಲ್ಲಿ ಬೇರೆ ಮಾತಿಲ್ಲ. 2022ರಲ್ಲಿ ನಾವು ನಿಮಗೆ ಸಮರ್ಪಕವಾದ ಗೌರವವನ್ನು ನೀಡುತ್ತೇವೆ. ಅದನ್ನು ನಿಮಗೆ ನೀವು ಗೌರವ ಕೊಡುವುದರ ಮೂಲಕ ಆರಂಭಿಸೋಣ. ಅದಾದ ಬಳಿಕ ಸಮಯ, ನಿಮ್ಮ ಕೌಶಲ, ನೀವು ಮಾಡುವ ಕೆಲಸ, ನಿಮ್ಮ ಕುಟುಂಬ, ನಿಮ್ಮ ಸ್ನೇಹಿತರ ಬಳಗ ಮತ್ತು ಸಹವರ್ತಿಗಳಿಗೆ ಹಾಗೂ ಕೊನೆಯದಾಗಿ ನಿಮ್ಮ ಸಂಪತ್ತು ಮತ್ತು ಜೀವನದಲ್ಲಿನ ನಿಮ್ಮ ಸ್ಥಾನಕ್ಕೆ ಗೌರವವನ್ನು ಕೊಡಿ. ನಮ್ಮಲ್ಲಿ ಬಹುತೇಕರಿಗೆ ಇದನ್ನು ನಾವೀಗಾಗಲೇ ಮಾಡುತ್ತಿದ್ದೇವೆ ಎಂಬ ಭಾವನೆ ಇರಬಹುದು. ಆದರೆ, ದೊಡ್ಡ ಮಟ್ಟಿನ ವ್ಯತ್ಯಾಸವಾಗುವುದು ಎಲ್ಲಿ ಎಂದರೆ ನೀವು ಇವನ್ನೆಲ್ಲ ಅತ್ಯಂತ ಪ್ರಜ್ಞಾಪೂರ್ವಕವಾಗಿ ಗುರುತಿಸಿದಾಗ ಮತ್ತು ಈ ಗೌರವವನ್ನು ಇನ್ನಷ್ಟು ಗಟ್ಟಿಗೊಳಿಸಲು ಶ್ರಮವಹಿಸಿದಾಗ. ಉದಾಹರಣೆಗೆ, ನೀವು ಸಮಯಕ್ಕೆ ಗೌರವವನ್ನು ನೀಡಿದರೆ ಪ್ರತಿಯೊಬ್ಬರಿಗೂ ನೀವು ನೀಡಿದ ಸಮಯಕ್ಕೆ ತಕ್ಕುನಾದ ಗೌರವ ಸಿಗುತ್ತ ಹೋಗುತ್ತದೆ. ಅದು ಕೆಲಸದ ಮಾತಾಗಿದ್ದರೆ, ಕೆಲಸದ ಸಮಯದಲ್ಲಿ ಏಕಾಗ್ರತೆಗೆ ಯಾವುದೇ ಭಂಗವಿಲ್ಲದ ಹಾಗೆ ಕೆಲಸದ ಕಡೆಗೆ ಗಮನವನ್ನು ನೀಡಬೇಕು. ಹಣದ ವಿಚಾರ ಬಂದಾಗ ಆ ವಿಚಾರದಲ್ಲಿ ನೀವು ಸರಿಯಾಗಿ ಯೋಚನೆ ಮಾಡುತ್ತಿದ್ದೀರಿ ಮತ್ತು ನೀವು ಕೈಗೊಳ್ಳುವ ಪ್ರತಿಯೊಂದು ಪ್ರಮುಖ ನಿರ್ಧಾರಕ್ಕೂ ಗೌರವವನ್ನು ನೀಡುತ್ತಿದ್ದೀರಿ ಎಂಬ ಬಗ್ಗೆ ಖಾತರಿ ಇರಲಿ. ಇಂತಹ ಸಣ್ಣ ಸಣ್ಣ ಬದಲಾವಣೆಗಳು, ಯೋಚನೆಗಳು ಕಾಲಕ್ರಮೇಣ ನಿಮ್ಮ ವ್ಯಕ್ತಿತ್ವವನ್ನು ರೂಪಿಸುತ್ತ ಹೋಗುತ್ತವೆ ಮತ್ತು ನೀವು ಹೆಚ್ಚು ಯಶಸ್ವಿಯಾಗಲು ಸಹಾಯ ಮಾಡುತ್ತದೆ.

## ಆಲಿಸಿ ಮತ್ತು ಹೆಚ್ಚು ಕಲಿಯಿರಿ

ಈ ಯುಗವು ಜ್ಞಾನದ ಗಣಿ. ನಮ್ಮ ಬದುಕಿನ ಪ್ರತಿಯೊಂದು ಸಂಗತಿಗಳೂ ಬದಲಾವಣೆಯನ್ನು ಹೊಂದುತ್ತವೆ. ಇವೆಲ್ಲವೂ ತಂತ್ರಜ್ಞಾನದ ಕೈಗೊಂಬೆಯಾಗಿವೆ. ಒಬ್ಬ ಉದ್ಯಮಿ, ವೃತ್ತಿಪರರು ಮತ್ತು ಹೂಡಿಕೆದಾರರು, ಯಾರೂ ಕೂಡ ಕಲಿಕೆ ಮತ್ತು ಜ್ಞಾನಕ್ಕೆ

ಹೊರತಾದವರಲ್ಲ. ವಿಶೇಷವಾಗಿ ಹೂಡಿಕೆದಾರರ ವಿಚಾರದಲ್ಲಿ ಮಾತನಾಡುವುದಾದರೆ ಜ್ಞಾನದ ಮೂಲಭೂತ ಅಂಶಗಳು ಮತ್ತು ಉಳಿತಾಯ, ತೆರಿಗೆ, ಹೂಡಿಕೆ ಮಾಡುವ ಉತ್ಪನ್ನಗಳು, ಹೂಡಿಕೆಯ ಕಾರ್ಯತಂತ್ರಗಳು, ಆಸ್ತಿ ವರ್ಗಗಳು, ರಿಸ್ಕ್, ವಿಮೆ, ಬಜೆಟ್, ಹಣಕಾಸು ಯೋಜನೆ ಇತ್ಯಾದಿ ವಿಷಯಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯಗತ್ಯ. ಈ ಎಲ್ಲ ವಿಚಾರಗಳಲ್ಲಿನ ಬದಲಾವಣೆಗಳ ಮೇಲೆ ಸದಾ ಕಣ್ಣಿಡುವುದು ನಿರಂತರ ಕಾರ್ಯ. ಒಬ್ಬ ಉತ್ತಮ ವಿತರಕನನ್ನು ಹೊಂದುವುದರಿಂದ ಪ್ರತಿಯೊಂದು ಕೆಲಸವನ್ನೂ ನೀವೇ ಸ್ವತಃ ಮಾಡುವ ತೊಂದರೆ ತಪ್ಪುತ್ತದೆ. ಇಂತಹ ಪ್ರಕರಣದಲ್ಲಿಯೂ ಕೂಡ ನಿಮ್ಮ ಕಲಿಕೆ ಮತ್ತು ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳುವುದರಲ್ಲಿ ಯಾವುದೇ ಅಪಾಯವಿಲ್ಲ.

**ಯೋಜನೆ, ಗುರಿ ಮತ್ತು ಗುರಿಗಳ ಅವಲೋಕನ:** ಯಾವುದೇ ಕಾರ್ಯದಲ್ಲಿ ಕರಾರುವಕ್ಕಾದ ಯೋಜನೆಯನ್ನು ರೂಪಿಸಿದರೆ ಅರ್ಧಕ್ಕರ್ಧ ಕೆಲಸ ಮುಗಿದಂತೆ ಸರಿ. ನಾವು ಅನೇಕ ಖಾಸಗಿ ಗುರಿಗಳನ್ನು ಹೊಂದಿರುತ್ತೇವೆ, ಆದರೆ ಅದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲು ಮತ್ತು ಅದಕ್ಕೊಂದು ದಿನಾಂಕಗಳನ್ನು ಅಥವಾ ಅವಧಿಯನ್ನು ನಿಗದಿ ಮಾಡುವಲ್ಲಿ ಎಡವುತ್ತೇವೆ. ನಾವು ಒಂದು ಮನೆ, ಕಾರು ಖರೀದಿ ಮಾಡುವ ವಿಚಾರವೇ ಆಗಲಿ, ಮಕ್ಕಳಿಗೆ ಉನ್ನತ ಶಿಕ್ಷಣವನ್ನು ನೀಡುವ ವಿಚಾರದಲ್ಲಾಗಲಿ ಮಾಡುವಂತಹ ಸಾಧನೆಗೆ ಬಂಡವಾಳ/ಹಣವೇ ಮುಖ್ಯ. ಇದನ್ನೇ ನಾವು ಹಣಕಾಸಿನ ಗುರಿಗಳು ಎಂದು ಕರೆಯುತ್ತೇವೆ. ಇದಕ್ಕೆ ನಾವು ಹೆಚ್ಚು ಸ್ಮಾರ್ಟ್ (SMART) ಆಗಿರುವುದು ಮುಖ್ಯವಾಗುತ್ತದೆ. ಇಲ್ಲಿ SMART ಅಂದರೆ ನಿರ್ದಿಷ್ಟ(Specific), ಅಳೆಯಬಹುದಾದ(Measurable), ಸಾಧಿಸಬಹುದಾದ (Achievable), ವಾಸ್ತವಿಕ (Realistic) ಮತ್ತು ಸಮಯದ ಚೌಕಟ್ಟಿನಲ್ಲಿ (Time frame) ಎಂದು ಅರ್ಥೈಸಬೇಕಾಗುತ್ತದೆ. ಈ ಗುರಿಗಳನ್ನು ಸಾಧಿಸಲು ನೀವು ಹಣಕಾಸು ತಜ್ಞರ ಸಹಾಯವನ್ನು ಪಡೆದುಕೊಳ್ಳುವುದು ಉತ್ತಮ. ಒಮ್ಮೆ ಗುರಿಗಳೊಂದಿಗೆ ಯೋಜನೆಗಳನ್ನು ರೂಪಿಸಿಕೊಂಡುಬಿಟ್ಟರೆ ಅವುಗಳನ್ನು ಆಗಾಗ ಅವಲೋಕನ ಮಾಡುವ ಅಗತ್ಯವಿರುತ್ತದೆ. ಕಾಲಕಾಲಕ್ಕೆ ಎಂದರೆ, ಪ್ರತಿ ವರ್ಷದ ಆರಂಭದಲ್ಲಿ ಮತ್ತು/ ಅಥವಾ ಜೀವನದಲ್ಲಿ ಯಾವುದೇ ಮಹತ್ವದ ಘಟನೆ ಸಂಭವಿಸಿದಾಗ.

**ಪರ್ಯಾಯ ಆದಾಯದ ಮೂಲವನ್ನು ರೂಪಿಸಿ:** ನಿಮ್ಮ ಸಂಪತ್ತಿನ ವ್ಯಾಪ್ತಿಯನ್ನು ವಿಸ್ತರಿಸಲು ಅತ್ಯಂತ ಖಚಿತವಾದ ದಾರಿ ಎಂದರೆ ವಿಭಿನ್ನ, ಪರ್ಯಾಯ ಆದಾಯದ ಮೂಲಗಳನ್ನು ಸೃಷ್ಟಿಸುವುದು. ನಿಮ್ಮ ಪ್ರಾಥಮಿಕ ಗಳಿಕೆಯ ಮೂಲ ಏನೇ ಇದ್ದರೂ ಕೂಡ ಕನಿಷ್ಠ ಒಂದೆರಡು ಪರ್ಯಾಯ ಆದಾಯದ ಮೂಲಗಳನ್ನು ಸೃಷ್ಟಿಸಿ. ಉದಾಹರಣೆಗೆ, ಹಳೆಯ ತಲೆಮಾರಿನವರು ಸಾಮಾನ್ಯವಾಗಿ ತಮ್ಮ ಜೀವನದ ಸ್ಥಿರತೆಯನ್ನು ಕಾಯ್ದುಕೊಳ್ಳಲು ಪಿಂಚಣಿ, ಬ್ಯಾಂಕ್ ನಿಶ್ಚಿತ ಠೇವಣಿಗಳಿಂದ/ಪಿಪಿಎಫ್‌ನಿಂದ ಮತ್ತು ಬಾಡಿಗೆ ಆದಾಯದಂತಹ ಬಹು ಆದಾಯದ ಮೂಲಗಳನ್ನು ಹೊಂದಿರುವುದನ್ನು ಕಾಣಬಹುದು. ಒಂದು ವೇಳೆ ನೀವು ವ್ಯಾಪಾರದ ಕ್ಷೇತ್ರದಲ್ಲಿದ್ದರೆ ನಾನಾ ರೀತಿಯ ವ್ಯಾಪಾರಗಳಲ್ಲಿ ತೊಡಗಿಸಿಕೊಂಡಿದ್ದರೆ ಸಹಾಯವಾಗುತ್ತದೆ. ನೀವು ವೃತ್ತಿಪರರಾಗಿದ್ದರೆ ಕನ್ಸಲ್ಟೆನ್ಸಿ, ಬೋಧನೆಯಂತಹ ಇನ್ನಿತರ ಆದಾಯದ ಮೂಲಗಳನ್ನು ಕಂಡುಕೊಳ್ಳಬಹುದು. ಒಂದೊಮ್ಮೆ ನೀವು ಉದ್ಯೋಗಿಯಾಗಿದ್ದರೆ ತರಬೇತಿ, ಕನ್ಸಲ್ಟೆನ್ಸಿ, ಒಪ್ಪಿತ ಮಾರ್ಗದಲ್ಲಿರುವ ಯಾವುದೇ ಇತರ ವ್ಯಾಪಾರಗಳು, ನೀವು ಹೂಡಿಕೆದಾರರಾಗಿದ್ದರೆ ನಿಮ್ಮ ಸುತ್ತಲಿರುವ ಉತ್ತಮ ವ್ಯಾಪಾರಗಳಲ್ಲಿ ಹೂಡಿಕೆಗಳನ್ನು ಮಾಡುವುದು ಇತ್ಯಾದಿ ಪರ್ಯಾಯ ಆದಾಯದ ಕಡೆಗೆ ಹೆಚ್ಚಿನ ಆದ್ಯತೆ ನೀಡಬಹುದಾಗಿದೆ. ಈ ವರ್ಷ ಇಂತಹುದೊಂದು ಪ್ರಮುಖ ಬದಲಾವಣೆಯನ್ನು ನೀವು ಮಾಡಿಕೊಳ್ಳಬಹುದು.




## ಹೂಡಿಕೆಯ ಮಾರ್ಗ/ ವಿಧಾನ ರೂಢಿಸಿಕೊಳ್ಳಿ

**ಹೂಡಿಕೆದಾರರಾಗಿ ನಾವು ಹೆಚ್ಚು ತಿಳುವಳಿಕೆಯನ್ನು ರೂಢಿಸಿಕೊಂಡು ಪ್ರಗತಿಯನ್ನು ಹೊಂದಬೇಕಾದರೆ ನಾವು ನಮ್ಮ ಹೂಡಿಕೆ ವಿಧಾನ/ಪ್ರಕ್ರಿಯೆಯನ್ನು ನಿಗದಿ ಮಾಡಿಕೊಳ್ಳಬೇಕಾಗುತ್ತದೆ. ನಿರಾಸಕ್ತಿ, ಉಪೇಕ್ಷೆಯ ಧೋರಣೆಯನ್ನು ಹೊಂದಿರುವುದು, ಪ್ರತಿ ಬಾರಿಯೂ ಖಾಸಗಿ ಹಣಕಾಸು ವಿಚಾರದಲ್ಲಿ ನಿರ್ಧಾರ ಕೈಗೊಳ್ಳುವಾಗ ನಿಲುವನ್ನು ಬದಲಿಸುವುದು ನಿಮಗೆ ಸಹಕಾರಿಯಾಗುವುದಿಲ್ಲ. ನೀವು ಮಾಡುವ ಖರ್ಚಿನಲ್ಲಿ, ಉಳಿತಾಯದಲ್ಲಿ, ಹೂಡಿಕೆಯಲ್ಲಿ, ಆಸ್ತಿ ಹಂಚಿಕೆಯಲ್ಲಿ ಮತ್ತು ಬಂಡವಾಳ ಪಟ್ಟಿಯ ನಿರ್ವಹಣೆಯಲ್ಲಿ ನಿಮ್ಮದೇ ಆದ ಮಾನದಂಡಗಳನ್ನು ಹೊಂದಿರಬೇಕು. ಭವಿಷ್ಯದಲ್ಲಿ ಇದು ಹೆಚ್ಚಿನ ಜ್ಞಾನ, ಕಲಿಕೆ ಮತ್ತು ಅನುಭವದೊಂದಿಗೆ ನೀವು ಇನ್ನಷ್ಟು ಸದೃಢರಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ.**




**ಹೂಡಿಕೆಗಳಲ್ಲಿ ಭಾವನೆಗಳು ಮತ್ತು ಪೂರ್ವಗ್ರಹ/ಒಲವುಗಳಿಗೆ ಅಂಕುಶ:** ಹಣ ಮತ್ತು ಭಾವನೆಗಳನ್ನು ಯಾವತ್ತೂ ಒಂದಕ್ಕೊಂದು ತಳಕು ಹಾಕಬಾರದು. ಎರಡೂ ಪರಸ್ಪರ ವಿರುದ್ಧಮುಖಿಗಳು. ಮನುಷ್ಯ ಆಸೆ, ದುರಾಸೆ, ಭಯದಂತಹ ಭಾವನೆಗಳ ಹಂದರ. ಇವು ಸಾಮಾನ್ಯವಾಗಿ ನಮ್ಮ ನಿರ್ಧಾರದ ಮೇಲೆ ಋಣಾತ್ಮಕವಾದ ಪರಿಣಾಮವನ್ನು ಬೀರುತ್ತವೆ. ಇದರ ಜೊತೆಗೆ ನಾವು ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ನಡೆದರೆ ಪೂರ್ವಗ್ರಹಗಳಿಗೆ ಈಡಾಗುತ್ತೇವೆ. ಹೂಡಿಕೆದಾರರಾಗಿ ಇವೆಲ್ಲಕ್ಕೆ ಅಂಕುಶ ಹಾಕುವುದು ಅತ್ಯಂತ ಅವಶ್ಯ. ಈ ವರ್ಷ ಅವುಗಳನ್ನು ಕಾರ್ಯರೂಪಕ್ಕೆ ತರೋಣ.

**ಸಂದೇಹಪಡದಿರಿ ಮತ್ತು ನಿಮಗೆ ನೀವು ಬ್ರೇಕ್ ಹಾಕಿಕೊಳ್ಳದಿರಿ:** ಯಾವುದೇ ನಿರ್ಬಂಧಗಳಿಲ್ಲದೆ ಜೀವನವನ್ನು ನಾವು ಪರಿಪೂರ್ಣವಾಗಿ ಅನುಭವಿಸಿದಾಗ ಮಾತ್ರ ನಮ್ಮ ದಿಗಂತ ವಿಸ್ತಾರವಾಗುತ್ತ ಹೋಗುತ್ತದೆ ಮತ್ತು ಲವಲವಿಕೆಯಿಂದ ಇರಲು ಸಾಧ್ಯವಾಗುತ್ತದೆ. ಆದರೆ ದುರಾದೃಷ್ಟವಶಾತ್ ನಾವು ಹಾಗಲ್ಲ. ನಾವು ಅನೇಕ ವಿಚಾರಗಳಲ್ಲಿ ನಮ್ಮ ಬಗ್ಗೆ ಮತ್ತು ನಮ್ಮ ಸುತ್ತಲಿರುವವರ ಬಗ್ಗೆ ಅನುಮಾನಪಡುತ್ತಾ ಹೋಗುತ್ತೇವೆ. ಇದರಿಂದಾಗಿ ನಾವು ನಮ್ಮ ಕನಸುಗಳನ್ನು ಸಾಕಾರಗೊಳಿಸಲು ಸಾಧ್ಯವಾಗುವುದಿಲ್ಲ ಮತ್ತು ಇಂತಹ ಅನುಮಾನಗಳಿಂದಾಗಿ ನಾವು ಪ್ರಯತ್ನವನ್ನೇ ಮಾಡಲು ಹೋಗುವುದಿಲ್ಲ. ನಿಜವಾದ ಸೋಲು ಯಾವಾಗ ಆಗುತ್ತದೆ ಎಂದರೆ ನಾವು ಪ್ರಯತ್ನವನ್ನೇ ಮಾಡದೇ ಕೈಬಿಟ್ಟಾಗ. ಸೋಲುಗಳನ್ನು ನಾವು ಯಾವತ್ತೂ ಮೈಲುಗಲ್ಲುಗಳಾಗಿ ಸ್ವೀಕರಿಸಲು ಸಿದ್ಧವಿರಬೇಕು ಮತ್ತು ಅವುಗಳನ್ನು ಕಲಿಕೆಯ ಅವಕಾಶಗಳು ಎಂದು ಅರ್ಥಮಾಡಿಕೊಂಡಾಗಲಷ್ಟೇ ಕನಸುಗಳು ನನಸಾಗಲು ಸಾಧ್ಯವಾಗುತ್ತದೆ.

**ನೀವೇ ಮುಂಚೂಣಿಯಲ್ಲಿರಿ:** ಅಂತಿಮವಾಗಿ ಹೇಳುವ ಮಾತೇನೆಂದರೆ ನಿಮ್ಮ ಖುಷಿ, ನಿಮ್ಮ ವ್ಯಕ್ತಿತ್ವ ಯಾವತ್ತೂ ನಿಮ್ಮ ಜವಾಬ್ದಾರಿಯೇ ಆಗಿರುತ್ತದೆ. ನಿಮ್ಮನ್ನು ನೀವು ಉತ್ತಮ ಹಾದಿಗೆ ತಂದುಕೊಳ್ಳಲು ಧನಾತ್ಮಕವಾದ ನಿರ್ಧಾರಗಳನ್ನು ಕೈಗೊಳ್ಳಿ ಮತ್ತು ನಿಮ್ಮನ್ನು ನೀವು ಉತ್ತಮವಾಗಿ ಬಿಂಬಿಸಿಕೊಳ್ಳಿ. ನಿಮಗಾಗಿ ನೀವು ಹೂಡಿಕೆಗಳನ್ನು ಮಾಡಿಕೊಳ್ಳಿ; ಅದು ಅನುಭವ, ಕಲಿಕೆ, ಸಂಪರ್ಕಗಳು, ಉತ್ತಮವಾಗಿ ಡ್ರೆಸ್ ಮಾಡಿಕೊಳ್ಳುವುದು, ಅಲಂಕರಿಸುವುದು ಹೀಗೆ ಅದು ಯಾವುದೇ ರೂಪದಲ್ಲಾದರೂ ಇರಬಹುದು. ನಿಮ್ಮ ಸುತ್ತ ಇರುವವರಿಗಾಗಿ ಅವಶ್ಯಕ ಕೆಲಸ ಮಾಡುತ್ತಲೇ ನಿಮಗಾಗಿ ಸಮಯ ಮಾಡಿಕೊಳ್ಳುವುದನ್ನು ಮರೆಯಬೇಡಿ. ಖುಷಿಯಾಗಿರಲು, ಆರಾಮವಾಗಿರಲು, ಮಜಾ–ಮಸ್ತಿ ಮಾಡುತ್ತ ನಿಮಗೆ ನೀವು ಇಂಧನವನ್ನು ತುಂಬಿಕೊಳ್ಳಿ. ಹೀಗೆ ನಿಮ್ಮ ಜೀವನ ಮತ್ತು ಕೆಲಸದಲ್ಲಿ ಉತ್ತಮ ರೀತಿಯ ಸಮತೋಲನ ಕಾಪಾಡಿಕೊಳ್ಳಲು ಪ್ರಯತ್ನಿಸಿ.

**ಒಟ್ಟು ಸಾರಾಂಶ: ಇಲ್ಲಿ ಹಂಚಿಕೊಳ್ಳಲಾದ ಹತ್ತು ಅಂಶಗಳು ಯಾವುದೇ ಹೊಸ ವರ್ಷದ ನಿರ್ಣಯಗಳಲ್ಲ. ಮೇಲೆ ಪ್ರಸ್ತಾಪ ಮಾಡಿದ ಪ್ರತಿಯೊಂದು ವಿಷಯಗಳು ಕೂಡ ನಿಮ್ಮ ಯೋಚನೆ ಮತ್ತು ಪರಿಶೀಲನೆಗೆ ತಕ್ಕುದಾಗಿವೆ. ಕೆಲವು ವಿಷಯಗಳು ಅಸ್ಪಷ್ಟವಾಗಿ ಮತ್ತು ಕೆಲವು ವಿಶಾಲ ತಳಹದಿಯವುಗಳಾಗಿ ಕಾಣಬಹುದು. ಆದರೆ ಅವುಗಳನ್ನು ಇನ್ನಷ್ಟು ಆಳವಾಗಿ ಪರಿಗಣಿಸಿದಾಗ ಮತ್ತು ಅವುಗಳನ್ನು ನಿಭಾಯಿಸಲು ನಿರ್ದಿಷ್ಟ ಕ್ರಮಗಳನ್ನು ಕೈಗೊಂಡಾಗ ಅವು ನಿಮ್ಮ ಜೀವನದಲ್ಲಿ ಲಾಭದಾಯಕವಾಗುವುದು ನಿಶ್ಚಿತ.**




# ವಿಮಾ ಕ್ಲೈಮ್ ತಿರಸ್ಕಾರಕ್ಕೆ ಕಾರಣಗಳು ಹಲವು




ನೀವು ಈಗಷ್ಟೇ ಗಂಭೀರ ಕಾಯಿಲೆಗೆ ಒಳಗಾಗಿದ್ದೀರಿ. ಆಸ್ಪತ್ರೆಗೆ ದಾಖಲಾಗಿರುವುದು ಮತ್ತು ಚಿಕಿತ್ಸೆಗೆ ನೀವು ಲಕ್ಷಾಂತರ ರೂಪಾಯಿ ಖರ್ಚಾಗಿರುವುದನ್ನು ನೋಡುತ್ತೀರಿ. ಆಸ್ಪತ್ರೆಯಲ್ಲಿ ನೀವು ನಗದು-ರಹಿತ ಕ್ಲೈಮ್‌ಗೆ ಅರ್ಜಿಯನ್ನು ಸಲ್ಲಿಸುತ್ತೀರಿ. ಆದರೆ ನಿಮಗೆ ಆಘಾತ ಕಾದಿರುತ್ತದೆ; ನಿಮ್ಮ ಅರ್ಜಿ ತಿರಸ್ಕೃತವಾಗಿರುತ್ತದೆ. ಇಂತಹ ಸ್ಥಿತಿಯಲ್ಲಿ ನೀವು ಗಾಬರಿಗೆ ಒಳಗಾಗುತ್ತೀರಿ. ಆಸ್ಪತ್ರೆ ಖರ್ಚನ್ನು ಹೇಗೆ ಭರಿಸುವುದು ಎಂಬ ಚಿಂತೆಗೆ ಬೀಳುತ್ತೀರಿ.

ಆಸ್ಪತ್ರೆ ಖರ್ಚು ಚಿಕ್ಕದಿರಲಿ, ದೊಡ್ಡ ಪ್ರಮಾಣದ್ದಾಗಿರಲಿ, ವಿಮಾ ಕ್ಲೈಮ್ ತಿರಸ್ಕೃತಗೊಂಡರೆ ನಿರಾಶೆಯಾಗುವುದು, ದಾರಿ ಕಾಣದಂತಾಗುವುದು ನಿಶ್ಚಿತ. ಯಾಕೆಂದರೆ ವಿಮಾ ಪಾಲಿಸಿಯನ್ನು ಖರೀದಿ ಮಾಡುವ ಮೂಲ ಉದ್ದೇಶವೇ ಯಾವುದಾದರೂ ದುರಾದೃಷ್ಟ ಘಟನೆ ಸಂಭವಿಸಿದರೆ ನಿಮ್ಮ ಹಣಕಾಸು ಅಗತ್ಯಗಳನ್ನು ಪೂರೈಸಿಕೊಳ್ಳಲು. ಇಂತಹ ಸಂದರ್ಭದಲ್ಲಿ ಕ್ಲೈಮ್ ತಿರಸ್ಕೃತಗೊಂಡರೆ ನಿಮ್ಮ ಇಡೀ ಉದ್ದೇಶವೇ ವಿಫಲಗೊಂಡಂತೆ ಮತ್ತು ನಿಮ್ಮ ಬಳಿ ಯಾವುದೇ ಸಂಪನ್ಮೂಲ ಉಳಿದಿರುವುದಿಲ್ಲ. ನಿಮ್ಮ ಬಳಿ ಸಾಕಷ್ಟು ಹಣಕಾಸು ಇಲ್ಲದೇ ಹೋದರೆ ಈ ಹಠಾತ್ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವುದು ಎಂಬ ಪ್ರಶ್ನೆ ನಿಮ್ಮ ಮುಂದೆ ಎದುರಾಗುತ್ತದೆ. ನಿಮಗೆ ನಿಜಕ್ಕೂ ಅಚ್ಚರಿಯಾಗುವುದು ಕ್ಲೈಮ್ ಅರ್ಜಿ ಯಾಕೆ ತಿರಸ್ಕೃತವಾಗಿದೆ ಎಂದು.

ಭಾರತದಲ್ಲಿ ಯಾವುದೇ ಸಕಾರಣವಿಲ್ಲದೆ ಅಥವಾ ಆಧಾರವಿಲ್ಲದೆ ಕ್ಲೈಮ್ ತಿರಸ್ಕೃತಗೊಳ್ಳುವುದಿಲ್ಲ. ವಿಮಾ ನಿಯಂತ್ರಕರು ಕ್ಲೈಮ್ ಇತ್ಯರ್ಥ ಮಾಡುವ ಅನುಪಾತದ ಸರಿಯಾದ ಜಾಡನ್ನು ಕಾಯ್ದುಕೊಂಡಿರುತ್ತಾರೆ. ಈ ಅನುಪಾತವು ವಿಮಾದಾರರು ಮಾಡಿದ ಕ್ಲೈಮ್‌ಗಳಿಗೆ ಪ್ರತಿಯಾಗಿ ಕ್ಲೈಮ್ ಸ್ವೀಕರಿಸಿದ ಅಥವಾ ಇತ್ಯರ್ಥ ಮಾಡಿದ ಅನುಪಾತದ ಸೂಚಕವಾಗಿರುತ್ತದೆ. ಈಗಿರುವ ಪೈಪೋಟಿಯ ಕಾರಣದಿಂದಾಗಿ ವಿಮಾದಾರರು ಈ ಪೈಪೋಟಿಯನ್ನು ಮೀರಿಸುವಂತಹ ಅಧಿಕ ಅನುಪಾತವನ್ನು ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಗಿರುತ್ತಾರೆ. ಈ ಸಂಬಂಧದ ಚಿತ್ರಣವನ್ನು ನಿಮ್ಮ ಮುಂದೆ ಮಂಡಿಸುವುದಾದರೆ, 2020-2021ರಲ್ಲಿ ಜೀವ ವಿಮಾ ಕ್ಷೇತ್ರದಲ್ಲಿನ ಕ್ಲೈಮ್ ಇತ್ಯರ್ಥದ ಅನುಪಾತ ಶೇ.98.39 ಮತ್ತು ತಿರಸ್ಕೃತ ಅನುಪಾತ ಶೇ.1.14 ಮಾತ್ರ. ಅಷ್ಟೊಂದು ಅಧಿಕ ಸಂಖ್ಯೆಯ ಪಾಲಿಸಿಗಳಿದ್ದರೂ ಕೂಡ ಕ್ಲೈಮ್ ತಿರಸ್ಕೃತಗೊಳ್ಳುವುದು ಅಸಾಮಾನ್ಯವೇನೂ ಅಲ್ಲ.

## ಕ್ಲೈಮ್‌ಗಳು ತಿರಸ್ಕೃತಗೊಳ್ಳಲು ಕೆಲವು ಸಾಮಾನ್ಯ ಕಾರಣಗಳು

### ಪಾರದರ್ಶಕತೆಯ ಕೊರತೆ– ಸರಿಯಿಲ್ಲದ ಅಥವಾ ಅಪೂರ್ಣ ಮಾಹಿತಿಗಳು

ನೀವು ವಿಮಾ ಪಾಲಿಸಿಗಾಗಿ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ವಿಮಾದಾರರು ಕೇಳಿದ ಸಂಪೂರ್ಣ ಕರಾರುವಕ್ಕಾದ ವಿವರಗಳನ್ನು ನೀಡಬೇಕು. ನೀವು ಸಂಪೂರ್ಣವಾದ ಮಾಹಿತಿಯನ್ನು ನೀಡಿಲ್ಲ ಎಂದು ವಿಮಾದಾರರಿಗೆ ಮನವರಿಕೆಯಾದರೆ ಮತ್ತು ಈ ಮಾಹಿತಿಯು ಕ್ಲೈಮ್ ಮಾಡುವ ವಿಚಾರದಲ್ಲಿಯೂ ಮುಖ್ಯ ಕಾರಣವಾಗುತ್ತದೆ ಎಂಬುದು ಗೊತ್ತಾದರೆ ಕ್ಲೈಮ್ ತಿರಸ್ಕೃತಗೊಳ್ಳುವ ಸಾಧ್ಯತೆ ಇರುತ್ತದೆ.

ವಿಮಾ ಪಾಲಿಸಿಯು ಯಾವತ್ತೂ ವಿಶ್ವಾಸ-ನಂಬಿಕೆಯ ಸಿದ್ಧಾಂತದ ತಳಹದಿಯ ಮೇಲೆ ನಿಂತಿರುತ್ತದೆ. ನೀವು ಯಾವ ಮಾಹಿತಿಯನ್ನು ಕೊಟ್ಟಿರುತ್ತೀರೋ ಅದನ್ನು ವಿಮಾದಾರರು ನಂಬಿರುತ್ತಾರೆ. ವಯಸ್ಸು, ಉದ್ಯೋಗ, ಆದಾಯ, ವೈದ್ಯಕೀಯ ಹಿನ್ನೆಲೆ, ಜೀವನ ಕ್ರಮ, ಅಭ್ಯಾಸಗಳು, ಧೂಮಪಾನ ಮತ್ತು ಮದ್ಯಪಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀವು ಪ್ರಾಥಮಿಕವಾಗಿ ಬಹಿರಂಗಗೊಳಿಸಬೇಕಾದ ಅಗತ್ಯವಿರುತ್ತದೆ. ಇದೇ ಸೌಲಭ್ಯಕ್ಕಾಗಿ ನೀವು ಈಗಾಗಲೇ ಪಡೆದಿರುವ ವಿಮಾ ಪಾಲಿಸಿಗಳ ವಿವರಗಳನ್ನು ಕೂಡ ಬಹಿರಂಗಪಡಿಸುವುದು ಮುಖ್ಯ. ಪ್ರೀಮಿಯಂ ಮೊತ್ತವನ್ನು ತಗ್ಗಿಸುವ ಉದ್ದೇಶದಿಂದ ಅಥವಾ ಪಾಲಿಸಿಯನ್ನು ನೀಡುವ ವಿಚಾರದಲ್ಲಿ ಯಾವುದೇ ವಿವಾದವಿಲ್ಲ ಎಂಬುದನ್ನು ತೋರಿಸುವ ಉದ್ದೇಶದಿಂದ ಅಂಶಗಳನ್ನು ಅಡಗಿಸುವ ಅಥವಾ ತಪ್ಪು ಮಾಹಿತಿಗಳನ್ನು ನೀಡುವ ಸಾಧ್ಯತೆಯಿರುತ್ತದೆ. ಇದೊಂದು ಅಪಾಯಕಾರಿ ಜೂಜಾಟವಾಗಬಹುದು ಮತ್ತು ಅದು ನಿಮ್ಮನ್ನು ಅತ್ಯಂತ ಕಷ್ಟದ ಸಮಯದಲ್ಲಿ ಇನ್ನಷ್ಟು ಸಂಕಷ್ಟಕ್ಕೆ ಗುರಿಮಾಡಬಹುದು. ಇವೆಲ್ಲವನ್ನೂ ತಪ್ಪಿಸುವ ಉತ್ತಮ ಮಾರ್ಗವೆಂದರೆ ಎಲ್ಲ ಮಾಹಿತಿಯನ್ನು ಕರಾರುವಕ್ಕಾಗಿ ಬಹಿರಂಗಪಡಿಸುವುದು ಮತ್ತು ಒದಗಿಸಿರುವ ದತ್ತಾಂಶಗಳು ಸತ್ಯದಿಂದ ಕೂಡಿರುವಂತೆ ನೋಡಿಕೊಳ್ಳಿ.

### ಅವಧಿ ಮುಗಿದ ಪಾಲಿಸಿ/ ಪ್ರೀಮಿಯಂ ಪಾವತಿಯಲ್ಲಿ ವಿಳಂಬ

ನಿಮ್ಮ ಪಾಲಿಸಿಯನ್ನು ಸಕಾಲದಲ್ಲಿ ರಿನೀವಲ್ ಮಾಡದೇ ಇದ್ದರೆ ಅಥವಾ ಸಕಾಲದಲ್ಲಿ ಪ್ರೀಮಿಯಂ ಪಾವತಿ ಮಾಡದೇ ಇದ್ದರೆ ಪಾಲಿಸಿಯು ರದ್ದಾಗಿ ಹೋಗುವ ಅಪಾಯವಿರುತ್ತದೆ. ಬಹುತೇಕ ವಿಮಾ ಕಂಪೆನಿಗಳು ಪ್ರೀಮಿಯಂನ್ನು ಪಾವತಿ ಮಾಡಲು ಪಾಲಿಸಿದಾರರಿಗೆ ರಿಯಾಯ್ತಿ ಅವಧಿಯನ್ನು ನೀಡಿರುತ್ತವೆ. ಯಾವುದೇ ಕಾರಣಕ್ಕೆ ಆ ಗಡುವಿನ ಒಳಗೆ ಪ್ರೀಮಿಯಂ ಹಣವನ್ನು ಪಾವತಿ ಮಾಡಬೇಕು. ಈ ರಿಯಾಯ್ತಿ ಅವಧಿಯ ಬಳಿಕವೂ ಪಾಲಿಸಿದಾರರು ಪ್ರೀಮಿಯಂ ಪಾವತಿ ಮಾಡದೇ ಇದ್ದರೆ ಆ ಪಾಲಿಸಿ ರದ್ದಾಗುತ್ತದೆ. ಈ ಗಡುವಿನ ಅವಧಿಗೂ ಮುನ್ನ ಪ್ರೀಮಿಯಂ ಪಾವತಿಯನ್ನು ಮಾಡುವುದರಿಂದ ಗಡುವು ಮುಗಿದ ನಂತರ ಏನಾದರೂ ಸಂಭವಿಸಿದರೆ ಕ್ಲೈಮ್ ತಿರಸ್ಕೃತಗೊಳ್ಳುವುದು ಖಚಿತ. ಸಕ್ರಿಯ ವಿಮಾ ಪಾಲಿಸಿಗಳಿಗೆ ಮಾತ್ರ ಕ್ಲೈಮ್‌ಗಳನ್ನು ಪಾವತಿ ಮಾಡಲಾಗುತ್ತದೆ. ಕಂಪನಿಗಳು ಪ್ರೀಮಿಯಂ ಪಾವತಿ ಮಾಡುವಂತೆ ಸಂದೇಶಗಳ ಮೂಲಕ ನಿಯಮಿತವಾಗಿ ನೆನಪು ಮಾಡುತ್ತವೆಯಾದರೂ ಪ್ರೀಮಿಯಂ ಪಾವತಿ ಮತ್ತು ಪಾಲಿಸಿಯನ್ನು ಮುಂದುವರಿಸುವುದಕ್ಕೆ ಸಂಬಂಧಿಸಿದಂತೆ ವೈಯಕ್ತಿಕವಾದ ಮಾಹಿತಿಯನ್ನು ಇಟ್ಟುಕೊಳ್ಳುವುದು ಉತ್ತಮ ಅಭ್ಯಾಸವಾಗಿರುತ್ತದೆ.

### ಹೊರಗಿಟ್ಟ ಅಂಶಗಳು

ಪ್ರತಿಯೊಂದು ವಿಮಾ ಪಾಲಿಸಿಗೂ ಕೂಡ ಅದರದ್ದೇ ಆದ ಉತ್ತಮ ಗುಣಗಳಿರುತ್ತವೆ. ಪಾಲಿಸಿಗೆ ಸಂಬಂಧಿಸಿದ ದಾಖಲೆಯಲ್ಲಿ ವಿಮಾ ನಿಯಮಗಳ ಬಗ್ಗೆ ವಿವರವಾದ ಮಾಹಿತಿ ಇರುತ್ತದೆ. ಅಲ್ಲಿ ನೀವು ವಿಮೆಯನ್ನು ಪಡೆಯುವ ವ್ಯಕ್ತಿ/ಆಸ್ತಿ, ಪಾಲಿಸಿಯ ಮಿತಿಗಳು, ವಾರಸುದಾರರ ಜವಾಬ್ದಾರಿಗಳು, ಒಳಗೊಳ್ಳುವ ರಿಸ್ಕ್‌ಗಳು ಮುಂತಾದ ಮಾಹಿತಿಗಳ ಜೊತೆಗೆ ಪಾಲಿಸಿಯನ್ನು ಹೊರತಾಗಿರುವ ಮತ್ತು ಒಳಗೊಳ್ಳದೇ ಇರುವ ರಿಸ್ಕ್‌ಗಳ ವಿವರಗಳೂ ಇರುತ್ತವೆ. ಒಂದು ವೇಳೆ ಅನೇಕ ಕಾರಣಗಳು ಇದ್ದರೆ ವಿಮಾ ಕಂಪನಿಗಳು ಘಟನೆಗೆ ನಿಕಟವಾಗಿರುವ ಕಾರಣವನ್ನು ಪತ್ತೆ ಮಾಡಲು 'ನಿಕಟ ಕಾರಣದ ಸಿದ್ಧಾಂತ'ವನ್ನು ಅನುಸರಿಸುತ್ತವೆ. ಪಾಲಿಸಿಯಲ್ಲಿ ಈ ಅಂಶವನ್ನು ಸೇರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಿ. ಪ್ರತಿಯೊಂದು ವಿಮಾ ಪೂರೈಕೆದಾರರು ಕೆಲವು ಷರತ್ತುಗಳನ್ನು ಹಾಕಿರುತ್ತಾರೆ. ಅದರ ಅಡಿಯಲ್ಲಿ ಕ್ಲೈಮ್‌ಗಳು ತಿರಸ್ಕೃತಗೊಳ್ಳುತ್ತವೆ. ಇದಕ್ಕೆ ಒಂದು ಉದಾಹರಣೆ ಟರ್ಮ್ ಇನ್ಶೂರೆನ್ಸ್. ಇದರಲ್ಲಿ ಆತ್ಮಹತ್ಯೆ, ಅತಿಯಾದ ಮಾದಕವಸ್ತು ಸೇವನೆ ಮತ್ತು ಇತರ ಕಾರಣಗಳಿಂದ ಉಂಟಾಗುವ ಸಾವನ್ನು ಸಾಮಾನ್ಯವಾಗಿ ಪಾಲಿಸಿಯಲ್ಲಿ ಸೇರಿಸಲಾಗುವುದಿಲ್ಲ. ಅಂತಹ ಅರ್ಜಿಗಳನ್ನು ಕಂಪನಿಯು ತಿರಸ್ಕರಿಸುತ್ತದೆ. ಅದೇ ರೀತಿ ಇನ್ನೂ ಅನೇಕ ರೋಗಗಳಿಗೆ ನಿರ್ಬಂಧವಿರುತ್ತದೆ ಅಥವಾ ಅವುಗಳನ್ನು ಹೆಚ್ಚಿನ ಆರೋಗ್ಯ ಯೋಜನೆಗಳಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ಕೆಲವು ರಿಸ್ಕಗಳನ್ನು ಸೇರಿಸುವ ವಿಚಾರದಲ್ಲಿ ಅನೇಕ ಪಾಲಿಸಿಗಳಲ್ಲಿ ಕಾಯುವ ಅವಧಿ ಇರುತ್ತದೆ. ನಿಮ್ಮ ಮೂಲ



ಪಾಲಿಸಿಯಲ್ಲಿ ವಿಶೇಷವಾಗಿ ಹೊರಗಿಡಲಾಗಿರುವ ಅಂಶಗಳನ್ನು ಸೇರಿದಂತೆ ಗರಿಷ್ಠ ಪ್ರಮಾಣದ ರಿಸ್ಕ್‌ನ್ನು ಒಳಗೊಳ್ಳುವುದನ್ನು ಖಾತರಿಪಡಿಸಲು, ನಿಮ್ಮ ಮೂಲ ಪಾಲಿಸಿಗೆ ಹೆಚ್ಚುವರಿ ರೈಡರ್‌ಗಳನ್ನು ಸೇರಿಸಲು ಯೋಚನೆ ಮಾಡಬಹುದು. ಇದರಿಂದ ಮಾನಸಿಕ ನೆಮ್ಮದಿ ದೊರೆಯುತ್ತದೆ.

## ಕ್ಲೈಮ್‌ಗಳ ಸಲ್ಲಿಕೆಯಲ್ಲಿ ವಿಳಂಬ

ಕ್ಲೈಮ್‌ನ್ನು ಸಲ್ಲಿಸಲು ವಿಮಾ ಕಂಪನಿಗಳು ನ್ಯಾಯಸಮ್ಮತವಾದ ಸಮಯವನ್ನು ನೀಡುತ್ತವೆ. ವಿಳಂಬಿತ ಸಲ್ಲಿಕೆ ಕಾರಣದಿಂದ ಕ್ಲೈಮ್‌ಗಳು ತಿರಸ್ಕೃತಗೊಳ್ಳುವುದು ಈಚಿನ ದಿನಗಳು ತುಂಬಾ ಅಪರೂಪ. ಆದರೆ, ನಿಗದಿತ ಅವಧಿಯನ್ನು ಮೀರಿದ ವಿಳಂಬದಿಂದ ಇದು ಸಂಭವಿಸುವ ಸಾಧ್ಯತೆ ಕೂಡ ಇರುತ್ತದೆ. ಸಕಾರಣಗಳನ್ನು ಒಳಗೊಂಡಿರುವ ವಿಳಂಬವನ್ನು ಯಾವುದೇ ಕಾರಣಕ್ಕೆ ತಿರಸ್ಕೃತಗೊಳ್ಳುವಂತಿಲ್ಲ ಎಂದು ಐಆರ್‌ಡಿಎಐ ವಿಮಾ ಕಂಪನಿಗಳಿಗೆ ನಿರ್ದೇಶನ ನೀಡಿದೆಯಾದರೂ ಯಾವುದೇ ಅಪಾಯವನ್ನು ಮೈಮೇಲೆ ಎಳೆದುಕೊಳ್ಳದೇ ಇರುವುದು ಉತ್ತಮ.

## ಒಟ್ಟು ಸಾರಾಂಶ

ವಿಮೆಯು ಒಂದು ಒಪ್ಪಂದ. ಕೆಲವು ಸಿದ್ಧಾಂತಗಳ ಆಧಾರದಲ್ಲಿ ಈ ಒಪ್ಪಂದವನ್ನು ಮಾಡಿಕೊಳ್ಳಲಾಗುತ್ತದೆ. ಈ ಒಪ್ಪಂದವನ್ನು ಸೂಕ್ತವಾಗಿ ಪಾಲಿಸುವ ಮೂಲಕ ಇದನ್ನು ಎತ್ತಿಹಿಡಿಯಬೇಕಾಗುತ್ತದೆ. ಇಂತಹ ಸಿದ್ಧಾಂತಗಳ ಜೊತೆ ರಾಜಿ ಮಾಡಿಕೊಂಡರೆ ಕ್ಲೈಮ್‌ಗಳು ತಿರಸ್ಕೃತಗೊಳ್ಳುವ ಅವಕಾಶ ಎದುರಾಗುತ್ತದೆ. ಹಾಗಾಗಿ, ಪಾಲಿಸಿಯಲ್ಲಿ ಒಳಗೊಂಡಿರುವ ಮತ್ತು ಒಳಗೊಳ್ಳದೇ ಇರುವ ರಿಸ್ಕ್‌ಗಳ ಬಗ್ಗೆ ನಮಗೆ ಸಾಕಷ್ಟು ಅರಿವಿರಬೇಕು ಮತ್ತು ಪ್ರಸ್ತಾವನೆ ಅರ್ಜಿ ನಮೂನೆಯಲ್ಲಿ ಕೇಳಲಾಗಿರುವ ಮುಖ್ಯವಾದ ಮಾಹಿತಿಗಳನ್ನು ಬಹಿರಂಗಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಅದೇ ರೀತಿ, ಈ ಪ್ರಸ್ತಾವನೆ ಅರ್ಜಿಯನ್ನು ವಿಮಾ ಏಜೆಂಟ್ ಭರ್ತಿ ಮಾಡದೇ ಇರುವಂತೆ ನೋಡಿಕೊಳ್ಳಬೇಕು. ಯಾಕೆಂದರೆ ಕೇಳಲಾಗಿರುವ ಕೆಲವು ಮಾಹಿತಿಗಳು ಆತ/ಆಕೆಗೆ ಗೊತ್ತಿಲ್ಲದೇ ಇರುವ ಸಾಧ್ಯತೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಯಾವುದೇ ಅವಸರಕ್ಕೆ ಅವಕಾಶ ಕೊಡದೆ ಸರಿಯಾದ ಸಂಗತಿಗಳನ್ನು ಭರ್ತಿ ಮಾಡಬೇಕು. ಇದರಿಂದ ಮುಂದೊಂದು ದಿನ ಪ್ರತಿಕೂಲ ಪರಿಣಾಮಗಳು ಉಂಟಾಗುವುದನ್ನು ತಪ್ಪಿಸಬಹುದು.

ಕೈಗಾರಿಕಾ ಮಟ್ಟದಲ್ಲಿ ವಿವರಿಸುವುದಾದರೆ, ವಿಮೆಯನ್ನು ಒದಗಿಸುವವರು ಕ್ಲೈಮ್ ತಿರಸ್ಕೃತಗೊಳ್ಳುವುದಕ್ಕೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯನ್ನು ಹಂಚಿಕೊಳ್ಳಬೇಕು ಮತ್ತು ತಿರಸ್ಕಾರಗೊಳ್ಳಲು ಕಾರಣವನ್ನು ನಿರ್ದಿಷ್ಟಪಡಿಸುವಂತೆ ಐಆರ್‌ಡಿಎಐ ತಾಕೀತು ಮಾಡುತ್ತದೆ. ಕ್ಲೈಮ್ ಪ್ರಕ್ರಿಯೆಯ ಅನೇಕ ಹಂತಗಳಲ್ಲಿ ಪಾಲಿಸದಾರರಿಗೆ ಸ್ಪಷ್ಟವಾದ ಮತ್ತು ಪಾರದರ್ಶಕವಾದ ಮಾಹಿತಿಯನ್ನು ವಿಮಾದಾರರು ನೀಡಬೇಕು ಎಂಬ ಸ್ಪಷ್ಟವಾದ ನಿಯಮವನ್ನು ಮಾಡಲಾಗಿದೆ. ಇಂದು ವಿಮಾದಾರರ ಕ್ಲೈಮ್ ಪರಿಷ್ಕರಣೆ ಹಿಂದೆಂದಿಗಿಂತ ಹೆಚ್ಚು ದಕ್ಷತೆಯಿಂದ ಕೂಡಿದೆ. ನಕಲಿ ಮತ್ತು ವಂಚನೆಯ ಕ್ಲೈಮ್‌ಗಳನ್ನು ತಿರಸ್ಕರಿಸಲು ವಿಮಾ ಸಂಸ್ಥೆಗಳು ಹೆಚ್ಚಿನ ಕಾಳಜಿಯನ್ನು ವಹಿಸುತ್ತಿವೆ. ನ್ಯಾಯಸಮ್ಮತವಾದ, ನೈಜವಾದ ಕ್ಲೈಮ್‌ಗಳು ಮಾತ್ರ ಪ್ರತಿಯೊಬ್ಬರಿಗೂ ಪಾಲಿಸಿಯನ್ನು ಅಗ್ಗವಾಗಿ ಮಾಡುತ್ತವೆ.

ಖುಷಿಯ ಸಂಗತಿ ಏನೆಂದರೆ ಇತ್ತೀಚಿನ ದಿನಗಳಲ್ಲಿ ಕ್ಲೈಮ್ ತಿರಸ್ಕೃತಗೊಳ್ಳುವುದು ವಿರಳವಾಗಿದೆ. ಹಾಗೆ ತಿರಸ್ಕೃತಗೊಂಡರೆ ಅದಕ್ಕೆ ಅನೇಕ ಕಾರಣಗಳು ಇರುತ್ತವೆ; ನಿಯಂತ್ರಕರ ಕಣ್ತಪ್ಪಿನಿಂದ, ಅತಿಯಾದ ಎಚ್ಚರಿಕೆಯಿಂದ, ಪೈಪೋಟಿ, ವಿಮಾ ಏಜೆಂಟ್‌ಗಳ ಗುಣಮಟ್ಟವನ್ನು ಸುಧಾರಿಸುವ ಕಸರತ್ತಿನಿಂದ ಮತ್ತು ಕ್ಲೈಮ್ ಪ್ರಕ್ರಿಯೆಯನ್ನು ಸರಳ ಮತ್ತು ಸುಗಮಗೊಳಿಸುವ ಪ್ರಯತ್ನದ ಫಲ. ವಿಮಾ ಕಂಪನಿಗಳ ಅತ್ಯಧಿಕವಾದ ಕ್ಲೈಮ್ ಇತ್ಯರ್ಥಪಡಿಸುವ ಅನುಪಾತಗಳನ್ನು ಗಮನಿಸಿದರೆ ನೀವಾಗಿಯೇ ಅವರಿಗೆ ಕಾರಣಗಳನ್ನು ಬಿಟ್ಟುಕೊಡದೇ ಇದ್ದರೆ ನೈಜ ಕ್ಲೈಮ್‌ಗಳನ್ನು ಅವುಗಳೂ ತಿರಸ್ಕರಿಸಲು ಬಯಸುವುದಿಲ್ಲ. ಈಗಿರುವ ಪಾಲಿಸಿಯಲ್ಲಿ ನೀವು ಉದ್ದೇಶಪೂರ್ವಕವಾಗಿ ಏನಾದರೂ ತಪ್ಪು ಮಾಡಿದ್ದರೆ ನೀವು ನಿಮ್ಮ ವಿಮಾ ಸಲಹೆಗಾರರ ಬಳಿ ತುರ್ತಾಗಿ ಸಮಾಲೋಚಿಸಬೇಕಾದ ಅವಶ್ಯಕತೆ ಇದೆ.



## ನ್ಯಾಯಸಮ್ಮತವಾದ ಕಾಳಜಿ ವಹಿಸದೇ ಇರುವುದು

**ಇಂತಹ ವಿಚಾರಗಳಲ್ಲಿ ನಿರೀಕ್ಷಿತವಾದ ಸಂಗತಿ ಏನೆಂದರೆ ಅಗತ್ಯವಿರುವ ನ್ಯಾಯಸಮ್ಮತವಾದ ಕಾಳಜಿಯನ್ನು ವಹಿಸುವುದು ಮತ್ತು ಯಾವುದೇ ಘಟನೆ ಸಂಭವಿಸದೇ ಇರುವಂತೆ ಎಚ್ಚರಿಕೆಯನ್ನು ವಹಿಸುವುದು. ನೀವು ವಿಮಾ ಪಾಲಿಸಿಯನ್ನು ಹೊಂದಿದ್ದೀರಿ ಎಂಬ ಕಾರಣಕ್ಕೆ ಬೇಜವಾಬ್ದಾರಿಯಿಂದ ವರ್ತಿಸುವುದು ಅಥವಾ ಕಡೆಗಣಿಸುವುದು ಸರಿಯಲ್ಲ. ನೀವು ಸಾಕಷ್ಟು ಎಚ್ಚರಿಕೆಯನ್ನು ವಹಿಸಿಲ್ಲ ಮತ್ತು ಬೇಜವಾಬ್ದಾರಿಯಿಂದ ವರ್ತಿಸಿದ್ದಕ್ಕೆ ಈ ಘಟನೆ ಸಂಭವಿಸಿದೆ ಎಂದು ವಿಮಾದಾರರಿಗೆ ಅನಿಸಿದರೆ ಕ್ಲೈಮ್ ತಿರಸ್ಕೃತಗೊಳ್ಳುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ ನೀವು ನಿಮ್ಮ ಕಾರಿನಲ್ಲಿ ಕಾಣುವಂತೆ ಅಮೂಲ್ಯವಾದ ವಸ್ತುಗಳನ್ನು ಇರಿಸಿದ್ದರೆ ಅಥವಾ ಬಸ್ಸಿನಲ್ಲಿ ಮೊಬೈಲ್ ಫೋನ್‌ನ್ನು ಅಜಾಗರೂಕತೆಯಿಂದ ಬಿಟ್ಟಿದ್ದರೆ ನಿಮ್ಮ ವಿಮಾದಾರರು ಇದನ್ನೊಂದು ಕಾರಣವೆಂದು ಕ್ಲೈಮ್ ತಿರಸ್ಕರಿಸಬಹುದು.**




**ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.**
(ARN–79020)
ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು
ನಮ್ಮ ಸಂಪರ್ಕ: 9148319207, 080–42129917
ಇ–ಮೇಲ್: Mail: info@inspireindiafs.com

**ವಿಳಾಸ**
INSPIRE INDIA WEALTH PVT LTD
@ 65, 'Surasa Enclave'
1st Floor, Puttanna Road,
Gandhi Bazar, Basavanagudi
Bengaluru-560004

**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ವಿಮೆ
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್
5. ತೆರಿಗೆ ಉಳಿತಾಯ ಬಾಂಡ್ ಗಳು
6. ಫೈನಾನ್ಸಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
7. ವೆಲ್ತ್ ಮ್ಯಾನೇಜ್ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ



**ಡಿಸ್ಕ್ಲೈಮರ್**

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯು ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯಕ್ಕೆ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.


**ಸಾಮಾನ್ಯವಾಗಿ ದುರ್ಗಮ ರಸ್ತೆಗಳು ಚೆಂದದ ಗುರಿಗಳನ್ನು ಮುಟ್ಟಿಸುತ್ತವೆ. ಯಾವತ್ತೂ ಹೂಡಿಕೆಯನ್ನು ಮಾಡುತ್ತಿರಿ ಮತ್ತು ಅದನ್ನು ಈಗಲೇ ಆರಂಭಿಸಿ.**

# WHY SHOULD YOU INVEST IN A BALANCED FUNDS?

- **Tax Benefits:** Since Balanced fund invests more than 65% of its portfolio in Equity, it is treated as an equity fund for taxation purpose. Capital appreciation after holding the investment for more than a year, is considered a long term capital gain, and is tax free in the hands of the investor.
- **Less Volatile:** The inclusion of a significant portion of debt in the portfolio protects your investment from downturns.
- **Return:** Balanced Funds rise with a rise in markets, and hence the investor gets an opportunity to earn in growing markets.
- **Diversification:** A balanced fund helps the investor diversify his money between debt and equity through a single investment.


Investing in balanced fund is best bet for a first time investor, among others. The return and risk appetite of a new investor is generally different than that of a mature investor and balanced funds satiate the desire to grow by investing in stocks as well as limit the risk by investing in debt.

## FD VS BALANCED FUND

| | FIXED DEPOSIT | BALANCED FUND |
|---|---|---|
| LONG TERM RETURNS | 4 - 5 % | 12 - 14 % |
| CAPITAL APPRECIATION | ✗ | ✓ |
| TAX EFFECTIVE RETURN | ✗ | ✓ |

ಮೊಟ್ಟ ಮೊದಲನೆಯದಾಗಿ ಈಪುಸ್ತಕ ಬರೆಯಲು ಕಾರಣವೇನೆಂದರೆ, ಹೂಡಿಕೆ ಎಂಬುದರ ಅರ್ಥವನ್ನು ಈಗಿನ ಸಂಕೀರ್ಣ ಅರ್ಥಕ್ಕಿಂತಒಂದಷ್ಟು ಸರಳೀಕರಿಸುವುದು.

ಹೂಡಿಕೆಯ ಬಗ್ಗೆ ಸಾಕಷ್ಟುಮಾಹಿತಿ ಇಲ್ಲದ ಬಹು ಮಂದಿ ನಮ್ಮಸುತ್ತಲೂ ಇದ್ದಾರೆ. ನಾವು ಏನನ್ನು ಹೂಡಿಕೆಮಾಡುತ್ತಿದ್ದೇವೆ?
ಎಷ್ಟು ಹೂಡಿಕೆ ಮಾಡುತ್ತಿದ್ದೇವೆ? ಮತ್ತು ಯಾವುದಕ್ಕಾಗಿ ಹೂಡಿಕೆ ಮಾಡುತ್ತಿದ್ದೇವೆ? ಎಂಬುದೇ ಗೊತ್ತಿಲ್ಲದ ವರ್ಗ ಅದು. ಈ ಪುಸ್ತಕಓದಿದ ನಂತರ ನಿಮ್ಮನ್ನು ನೀವು " ಸುಶಿಕ್ಷಿತ ಹೂಡಿಕೆದಾರ" ಎಂದು ಕರೆದುಕೊಳ್ಳಬಹುದು ಎಂಬುದನ್ನು ಖಾತ್ರಿಯಾಗಿ ಹೇಳಬಹುದು.





**Ganesh festival celebrations at Inspire**


**Christmas festival celebrations at Inspire**


**New office opening ceremony**


**New office opening ceremony**